ಸಂಪುಟ: 06 ಸಂಚಿಕೆ: 34 ಪುಟಗಳು: 08 ಶನಿವಾರ 18 ಏಪ್ರಿಲ್ 2026

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail. com

ಸಂಪಾದಕರು: ಟಿ. ಹೊಂಬೇಗೌಡ

RNI No. KARKAN/2021/80833

9448225696 +91 8035841833 ₹5

**ಮುಂಜಾನೆ ಮಾತು**

ಬಲಿಷ್ಠತೆ ಎನ್ನುವುದು ನಿಮ್ಮ ದೈಹಿಕ ಸಾಮರ್ಥ್ಯದಿಂದ ಬರುವಂಥದಲ್ಲ; ಅದು ಅದಮ್ಯ ಅಂತಃಶಕ್ತಿಯಿಂದ ಬರುವಂಥದ್ದು.

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ಶಿಕ್ಷಣ ಸಂಸ್ಥೆಗಳಲ್ಲಿ ಜಾತಿ ತಾರತಮ್ಯ ತಡೆಗೆ ಮಸೂದೆ ಜಾರಿ

• ಉದಯವಾಹಿನಿ, ಬೆಂಗಳೂರು

ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಇತರ ಹಿಂದುಳಿದ ವರ್ಗಗಳು ಹಾಗೂ ಧಾರ್ಮಿಕ ಅಲ್ಪಸಂಖ್ಯಾತರಿಗೆ ಸಮಾನ ಅವಕಾಶ ಮತ್ತು ಶಿಕ್ಷಣದ ಹಕ್ಕು ಕಲ್ಪಿಸುವ ಉದ್ದೇಶದಿಂದ ರೂಪಿಸಿರುವ 'ಕರ್ನಾಟಕ ರೋಹಿತ್ ವೇಮುಲ' ಮಸೂದೆಗೆ ನಡೆದ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಶಿಕ್ಷಣ ಸಂಸ್ಥೆಗಳಲ್ಲಿ ಜಾತಿ ತಾರತಮ್ಯ ತಡೆಯಲು 'ಕರ್ನಾಟಕ ರೋಹಿತ್ ವೇಮುಲ' (ಬಹಿಷ್ಕಾರ ಅಥವಾ ಅನ್ಯಾಯ ತಡೆಗಟ್ಟುವಿಕೆ) (ಶಿಕ್ಷಣ ಮತ್ತು ಘನತೆಯ ಹಕ್ಕು) ಮಸೂದೆಯನ್ನು ಸರ್ಕಾರ ರೂಪಿಸಿದೆ. 'ದೇಶದ ಶಿಕ್ಷಣ ವ್ಯವಸ್ಥೆಯಲ್ಲಿ ಯಾರೊಬ್ಬರೂ ಜಾತಿ ಆಧಾರದಲ್ಲಿ ತಾರತಮ್ಯ ಎದುರಿಸಬಾರದು.

ಇದನ್ನು ಖಾತ್ರಿಪಡಿಸಲು 'ರೋಹಿತ್ ವೇಮುಲ ಕಾಯ್ದೆ' ಹೆಸರಿನ ಕಾನೂನು ಕರ್ನಾಟಕ ದಲ್ಲೂ ರೂಪಿಸಿ, ಜಾರಿಗೊಳಿಸಬೇಕು' ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಈ ಹಿಂದೆ ಪತ್ರ ಬರೆದು ಆಗ್ರಹಿಸಿದ್ದರು.

ಮಸೂದೆಯು ಕಾಯ್ದೆಯಾಗಿ ಜಾರಿಗೆ ಬಂದ ನಂತರ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ವರ್ಗಗಳು, ಜಾತಿಗಳು, ಮತಗಳು, ಲಿಂಗ, ದೇಶ ಎಂಬ ತಾರತಮ್ಯ ಇಲ್ಲದೆ ಮುಕ್ತ ವಾತಾವರಣ ಇರಲಿದೆ. ಈ ಸಂಸ್ಥೆಗಳಲ್ಲಿನ ಪ್ರವೇಶವು ಜಾತಿ, ವರ್ಗ, ಮತ, ಲಿಂಗ ಅಥವಾ ದೇಶ ಎಂಬ ಭೇದ ಇಲ್ಲದೆ ಎಲ್ಲರಿಗೂ ಮುಕ್ತವಾಗಿರುತ್ತದೆ. ಅರ್ಹತಾ ಪರೀಕ್ಷೆಗಳಲ್ಲಿನ ಅಂಕಗಳ ಆಧಾರದಲ್ಲಿ ಪ್ರವೇಶಾತಿ ಸಿಗಲಿದೆ. ನಿಯಮವನ್ನು ಉಲ್ಲಂಘಿಸಿದ ವ್ಯಕ್ತಿಗಳಿಗೆ ಒಂದು ವರ್ಷ ಜೈಲು ಶಿಕ್ಷೆ, 10 ಸಾವಿರ ದಂಡ ವಿಧಿಸಲು ಮಸೂದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಸಂತ್ರಸ್ತನಿಗೆ ಆರೋಪಿಯು ಸೂಕ್ತ ಪರಿಹಾರ ನೀಡುವಂತೆ ನ್ಯಾಯಾಲಯ ಅನುಮತಿಸಲು ಕೂಡ ಅವಕಾಶ ಸಿಗಲಿದೆ.

## ಪಕ್ಷ ವಿರೋಧಿ ಚಟುವಟಿಕೆ: ಶಿಸ್ತು ಕ್ರಮ ಎಚ್ಚರಿಕೆ

• ಉದಯವಾಹಿನಿ, ಬಾಗಲಕೋಟೆ

ಬಾಗಲಕೋಟೆ ವಿಧಾನಸಭಾ ಉಪಚುನಾವಣೆ ವೇಳೆ ಪಕ್ಷ ವಿರೋಧಿ ಚಟುವಟಿಕೆ ನಡೆಸಿದ ಪಟ್ಟಣ ಪಂಚಾಯಿತಿಯ ಇಬ್ಬರು ಸದಸ್ಯರು ಮತ್ತು ಮುಖಂಡರೊಬ್ಬರನ್ನು ಆರು ವರ್ಷ ಉಚ್ಚಾಟಿಸುವಂತೆ ಶಿಫಾರಸು ಮಾಡಿರುವುದು ಉಳಿದ ನಾಯಕರ ಎದೆಬಡಿತ ಹೆಚ್ಚಿಸಿದೆ. ದಾವಣಗೆರೆ ದಕ್ಷಿಣ ವಿಧಾನಸಭಾ ಉಪಚುನಾವಣೆಯಲ್ಲಿ ಪಕ್ಷ ವಿರೋಧಿ ಚಟುವಟಿಕೆ ಹಿನ್ನೆಲೆಯಲ್ಲಿ ಕೆಲವರ ವಿರುದ್ಧ ಕ್ರಮ ಕೈಗೊಳ್ಳುತ್ತಿರುವ ಬೆನ್ನಲ್ಲೇ ಬಾಗಲಕೋಟೆಯ ನಾಯಕರಿಗೆ ತಳಮಳ ಉಂಟು ಮಾಡಿದೆ.

'ಪಕ್ಷ ವಿರೋಧಿ ಚಟುವಟಿಕೆ ಮಾಡಿದ ಆರೋಪದ ಮೇಲೆ ಕಮತಗಿ ಪಟ್ಟಣ ಪಂಚಾಯಿತಿ ಸದಸ್ಯರಾದ ರಮೇಶ ಜಮಖಂಡಿ, ಗುರುಲಿಂಗಪ್ಪ ಪಾಟೀಲ ಹಾಗೂ ಬಾಗಲಕೋಟೆ ಕೇಂದ್ರ ಸಹಕಾರಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಮುರುಗೇಶ ಕಡ್ಲಿಮಟ್ಟಿ ಅವರನ್ನು ಆರು ವರ್ಷ ಉಚ್ಚಾಟಿಸಬೇಕು.

ಪಕ್ಷದ ಅಭ್ಯರ್ಥಿ ಉಮೇಶ ಪರವಾಗಿ ಈ ಮೂವರು ಕೆಲಸ ಮಾಡಿಲ್ಲ' ಎಂದು ಆರೋಪಿಸಿ ಬಾಗಲಕೋಟೆ ಗ್ರಾಮೀಣ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಎಸ್.ಎನ್. ರಾಂಪುರ ಅವರು ಪಕ್ಷದ ಜಿಲ್ಲಾ ಘಟಕದ ಅಧ್ಯಕ್ಷ ಎಸ್.ಜಿ. ನಂಜಯ್ಯನಮಠ ಅವರಿಗೆ ಪತ್ರ ಬರೆದಿದ್ದಾರೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ ಅವರಿಗೂ ದೂರು ನೀಡಲಾಗಿದೆ. 'ಉಪಚುನಾವಣೆ ಸಂದರ್ಭದಲ್ಲಿ ಕೆಲ ಶಾಸಕರು, ಮುಖಂಡರು ಪಕ್ಷ ವಹಿಸಿದ ಕೆಲಸವನ್ನು ಸರಿಯಾಗಿ ಮಾಡಿಲ್ಲ' ಎಂದು ಕೆಲವರು ಚುನಾವಣಾ ಉಸ್ತುವಾರಿ ವಹಿಸಿಕೊಂಡಿದ್ದ ಸಚಿವ ಸತೀಶ ಜಾರಕಿಹೊಳಿ ಅವರಿಗೆ ಮೌಖಿಕವಾಗಿ ದೂರಿದ್ದಾರೆ ಎಂದು ತಿಳಿದುಬಂದಿದೆ.

## ಚಾರಣಿಗರ ಮೊಬೈಲ್‌ಗೆ ಟ್ರ್ಯಾಕಿಂಗ್ ಆ್ಯಪ್ ಅಳವಡಿಕೆ ಕಡ್ಡಾಯ: ಖಂಡ್ರೆ

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಅರಣ್ಯ ಇಲಾಖೆ ವ್ಯಾಪ್ತಿಗೆ ಒಳಪಡುವ ಎಲ್ಲಾ ಅನುಮೋದಿತ ಚಾರಣ ಪಥಗಳಲ್ಲಿ ಇನ್ನು ಮುಂದೆ ಪ್ರಕೃತಿ ಮಾರ್ಗದರ್ಶಕ ಇಲ್ಲದೆ ಚಾರಣಕ್ಕೆ ಅವಕಾಶ ಇರುವುದಿಲ್ಲ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ. ಖಂಡ್ರೆ ಸ್ಪಷ್ಟಪಡಿಸಿದ್ದಾರೆ. ಚಾರಣಿಗರ ಸುರಕ್ಷತೆಗಾಗಿ ರೂಪಿಸಲಾಗಿರುವ ಪ್ರಮಾಣಿತ ಕಾರ್ಯಾಚರಣೆ ವಿಧಾನಬಿಡುಗಡೆ ಮಾಡಿ ಮಾತನಾಡಿದ ಅವರು, ಪ್ರತಿ 10 ಚಾರಣಿಗರಿಗೆ ಒಬ್ಬರು ಸ್ಥಳೀಯ ಪ್ರಕೃತಿ ಮಾರ್ಗದರ್ಶಕರಿರುತ್ತಾರೆ. ಎಲ್ಲಾ ಚಾರಣ ಪಥಗಳಲ್ಲಿ ಒಂದು ಸಲಕ್ಕೆ ಗರಿಷ್ಠ 150 ಜನರಿಗೆ ಮಾತ್ರ ಸೀಮಿತಗೊಳಿಸಲಾಗುವುದು ಎಂದರು.

ಚಾರಣಕ್ಕೆ ಬರುವವರು ಆನ್‌ಲೈನ್‌ನಲ್ಲಿ ನೋಂದಾಯಿಸಿಕೊಳ್ಳುವುದು ಕಡ್ಡಾಯ. ಒಂದೊಮ್ಮೆ ಯಾವುದೇ ದಿನ ಒಬ್ಬರೇ ಚಾರಣಿಗರು ನೋಂದಾಯಿಸಿದ್ದರೂ ಗೈಡ್ ಸೌಲಭ್ಯ ಕಲ್ಪಿಸಲಾಗುವುದು, ಗೈಡ್ ಇಲ್ಲದೆ ಚಾರಣಕ್ಕೆ ಅವಕಾಶ ಇರುವುದಿಲ್ಲ ಎಂದರು.





# ಕುಲಕರ್ಣಿಗೆ ಸೆರೆವಾಸದ ಕುಣಿಕೆ

**40 ಎಕರೆ ಜಮೀನು ವಿವಾದ**

**ಯೋಗೇಶ್ ಗೌಡ ಕೊಲೆ ಕೇಸ್ ಶಾಸಕ ವಿನಯ್ ಕುಲಕರ್ಣಿ ಸೇರಿ 16 ಮಂದಿಗೆ ಜೀವಾವಧಿ ಶಿಕ್ಷೆ**

**ಯೋಗೇಶ್ ಗೌಡ ಹತ್ಯೆಯಲ್ಲಿ ವಿನಯ್ ಕುಲಕರ್ಣಿ ಪಾತ್ರ**

1 ಧಾರವಾಡ ಜಿಲ್ಲಾ ಪಂಚಾಯತ್ ಬಿಜೆಪಿ ಸದಸ್ಯ ಯೋಗೇಶ್ ಗೌಡ ಹತ್ಯೆ ಪ್ರಕರಣ

2 ಕಾಂಗ್ರೆಸ್ ಶಾಸಕ ವಿನಯ್ ಕುಲಕರ್ಣಿ ಸೇರಿದಂತೆ 17 ಮಂದಿ ದೋಷಿಗಳು

3 ವಿನಯ್ ಕುಲಕರ್ಣಿ ಮುಂದಿನ ಭವಿಷ್ಯ ಏನಾಗಲಿದೆ ಎಂಬುವುದೇ ಕುತೂಹಲ

• ಉದಯವಾಹಿನಿ, ಬೆಂಗಳೂರು

ಬಿಜೆಪಿ ಮುಖಂಡ ಯೋಗೇಶ್ ಗೌಡ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಏ.16 ಜನಪ್ರತಿನಿಧಿಗಳ ವಿಶೇಷ ಕೋರ್ಟ್ ಮಹತ್ವದ ತೀರ್ಪು ನೀಡಿದೆ. ಪ್ರಕರಣದ 15ನೇ ಆರೋಪಿ ಆಗಿರುವ ಕಾಂಗ್ರೆಸ್ ಶಾಸಕ ವಿನಯ್ ಕುಲಕರ್ಣಿ ಸೇರಿದಂತೆ 17 ಜನರನ್ನು ಅಪರಾಧಿಗಳು ಎಂದು ಘೋಷಣೆ ಮಾಡಿದೆ.

ಇದೀಗ ಈ ಸಂಬಂಧ ಶಾಸಕ ವಿನಯ್ ಕುಲಕರ್ಣಿಗೆ ಶಿಕ್ಷೆಯನ್ನು ಪ್ರಕಟಿಸಿದೆ. ವಿನಯ್ ಕುಲಕರ್ಣಿ ಸೇರಿದಂತೆ 16 ಮಂದಿಗೆ ಜೀವಾವಧಿ ಶಿಕ್ಷೆ ನೀಡಿದೆ. ಇನ್ನು 19ನೇ ಆರೋಪಿ ಚನ್ನಕೇಶವ ಟಿಂಗರಿಕರ್‌ಗೆ 7 ವರ್ಷ ಜೈಲು ಶಿಕ್ಷೆ ನೀಡಲಾಗಿದೆ ಹಾಗೂ ಇನ್ನು ಎ1 ಬಸವರಾಜ ಮುತ್ತಗಿ ಮಾಫಿ ಸಾಕ್ಷಿ ಸ್ಥಾನ ಕೋರ್ಟ್ ಖಚಿತಪಡಿಸಿದೆ. ಇದರ ಜತೆಗೆ ಯೋಗೀಶ್ ಗೌಡರ್ ಮಕ್ಕಳಿಗೆ 16 ಲಕ್ಷ ರೂ. ಹಣವನ್ನು ಪರಿಹಾರವಾಗಿ ನೀಡಲು ಸೂಚನೆ ನೀಡಿದೆ.

ಇದೊಂದು ಕರ್ನಾಟಕ ರಾಜಕಾರಣದಲ್ಲಿ ಭಾರೀ ದೊಡ್ಡ ಸಂಚಲವನ್ನು ಮೂಡಿಸಿದೆ. ಇದೀಗ ಅವರ ಶಾಸಕ ಸ್ಥಾನಕ್ಕೂ ಕುತ್ತು ಬಂದಿದೆ. ಕೇಂದ್ರ ಸರ್ಕಾರ ತಂದಿರುವ ಪ್ರಜಾ ಪ್ರತಿನಿಧಿ ಕಾಯ್ದೆಯಡಿಯಲ್ಲಿ ಅವರು ಶಾಸಕ ಸ್ಥಾನದಿಂದ ವಜಾ ಕೂಡ ಮಾಡಲಾಗಿದೆ. ಇನ್ನು ಈ ಪ್ರಕರಣದಲ್ಲಿ 21 ಆರೋಪಿಗಳಿದ್ದರೆ, ಇವರ ಪೈಕಿ ಇಬ್ಬರು ಮಾಫಿಸಾಕ್ಷಿಯಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಪೈಕಿ ಕೋರ್ಟ್, 19 ಆರೋಪಿಗಳನ್ನ ದೋಷಿ ಎಂದು ತೀರ್ಪು ನೀಡಿದೆ. ಎ1 ಬಸವರಾಜ ಮುತ್ತಗಿ ಮಾಫಿಸಾಕ್ಷಿಯಾಗಿ ಹೇಳಿಕೆ ನೀಡಿದ್ದರೆ, ಎ17 ಶಿವಾನಂದ ಮಾಫಿ ಸಾಕ್ಷಿಯಾದ ಬಳಿಕವೂ ಪ್ರತಿಕೂಲ ಹೇಳಿಕೆ ನೀಡಿದ್ದಾರೆ. ಹೀಗಾಗಿ ಮತ್ತೆ ಎ17 ಆರೋಪಿಯನ್ನಾಗಿಸುವಂತೆ ಸಿಬಿಐ ಅರ್ಜಿ ಸಲ್ಲಿಸಿದೆ. ಇನ್ನು ಪ್ರಕರಣದ ಎ 20 ವಾಸುದೇವ ನಿಲೇಕಣಿ, ಎ21 ಸೋಮಶೇಖರ ಅವರನ್ನ ಬಿಡುಗಡೆಗೆ ಕೋರ್ಟ್ ಆದೇಶಿಸಿತ್ತು. ಇನ್ನು ಉಳಿದಂತೆ ಎ2 ವಿಕ್ರಮ್, ಎ3 ಕೀರ್ತಿ ಕುಮಾರ್, ಎ 4 ಸಂದೀಪ್, ಎ5 ವಿನಾಯಕ್, ಎ6 ಮಹಾಬಲೇಶ್ವರ್ ಅಲಿಯಾಸ್ ಮುದಕ, ಎ 7 ಸಂತೋಷ್, ಎ 8 ದಿನೇಶ್, ಎ 9 ಅಶ್ವಥ್, ಎ10 ಸುನೀಲ್, ಎ 11 ನಜೀರ್ ಅಹಮದ್, ಎ 12 ಷಾನವಾಜ್, ಎ 13 ನೂತನ್ , ಎ14 ಹರ್ಷಿತ್, ಎ15 ವಿನಯ್ ಕುಲಕರ್ಣಿ, ಎ 16 ಚಂದ್ರು ಮಾಮ, ಎ18 ವಿಕಾಸ್ ಕಲಬುರ್ಗಿ, ಎ 19 ಚನ್ನಕೇಶವ ಟಿಂಗರಿಕರ್ ಅವರನ್ನು ದೋಷಿಗಳು ಎಂದು ಹೇಳಿ, ಶಿಕ್ಷೆಯನ್ನು ನೀಡಿದೆ.

**ಬಟ್ಟೆ ಬದಲಿಸಲು ಅನುಮತಿ ನೀಡುವಂತೆ ಮನವಿ :** ಯೋಗೀಶ್ ಗೌಡ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ಕೋರ್ಟ್ ವಿನಯ್ ಕುಲಕರ್ಣಿ ಅವರಿಗೆ ಜೀವಾವಧಿ ಶಿಕ್‌ಷೆಯನ್ನು ಘೋಷಣೆ ಮಾಡಿದೆ.

ಇದೀಗ ಅವರು 3 ದಿನದಿಂದ ಒಂದೇ ಬಟ್ಟೆಯಲ್ಲಿದ್ದಾರೆ, ಬಟ್ಟೆ ಬದಲಿಸಲು ಅನುಮತಿ ನೀಡುವಂತೆ ಶಾಸಕ ವಿನಯ್ ಕುಲಕರ್ಣಿ ಪರ ವಕೀಲ ಸುನಿಲ್ ಮನವಿ ಮಾಡಿದ್ದಾರೆ.

ಅಪರಾಧಿಗಳಿಗೆ ಬಟ್ಟೆ ಒದಗಿಸಲು ಜೈಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಜೈಲು ಕೈಪಿಡಿಯಲ್ಲಿರುವಂತೆ ಬಟ್ಟೆ ಒದಗಿಸಲು ಜಡ್ಜ್ ಸೂಚನೆ ನೀಡಿದ್ದಾರೆ. ಇದರ ಜತೆಗೆ ಪ್ರತಿ ಸೆಕ್ಷನ್‌ಗೂ ಪ್ರತ್ಯೇಕವಾಗಿ ದಂಡ ವಿಧಿಸಲಾಗಿದೆ. 2016ರ ಜೂನ್ 15ರಂದು ಧಾರವಾಡದ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಯೋಗೇಶ್ ಗೌಡ ಅವರನ್ನು ಸಪ್ತಾಪುರ ಬಡಾವಣೆಯ ಜಿಮ್‌ನಲ್ಲಿ ದುಷ್ಕರ್ಮಿಗಳು ಮಾರಕಾಸ್ತ್ರಗಳಿಂದ ಬರ್ಬರವಾಗಿ ಕೊಚ್ಚಿ ಕೊಲೆ ಮಾಡಿದ್ದರು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ಧಾರವಾಡದ ಉಪನಗರ ಪೊಲೀಸರು ದೂರು ದಾಖಲಿಸಿಕೊಂಡು ತನಿಖೆಯನ್ನು ನಡೆಸಿದ್ದರು. ಈ ಕೊಲೆ ಆಸ್ತಿ ವಿವಾದದ ವಿಚಾರಕ್ಕಾಗಿ ನಡೆದಿದೆ ಎಂದು ಹೇಳಲಾಗಿದೆ.

### 16 ಲಕ್ಷ ರೂಪಾಯಿ ಪರಿಹಾರವಾಗಿ ನೀಡುವಂತೆ ಸೂಚನೆ

ಕೊಲೆಯಾದ ಯೋಗೇಶ್ ಗೌಡ ಕುಟುಂಬಕ್ಕೆ 16 ಲಕ್ಷ ಪರಿಹಾರ ನೀಡುವಂತೆ ನ್ಯಾಯಾಲಯ ಸೂಚಿಸಿದೆ. ಇನ್ನು 17 ನೇ ಆರೋಪಿ ಚನ್ನಕೇಶವ ಟಿಂಗರಿಕರ್ ಗೆ 7 ವರ್ಷ ಜೈಲು ಶಿಕ್ಷೆ ನೀಡಲಾಗಿದೆ. ಪ್ರತಿ ಸೆಕ್ಷನ್‌ಗೂ ಪ್ರತ್ಯೇಕವಾಗಿ ದಂಡವನ್ನು ಕೋರ್ಟ್ ವಿಧಿಸಿದೆ. ಅಲ್ಲದೆ, ಎ 1 ಆರೋಪಿ ಮುತ್ತಗಿಗೆ ಮಾಫಿ ಸಾಕ್ಷಿ ಸ್ಥಾನವನ್ನು ಕೋರ್ಟ್ ಖಚಿತಪಡಿಸಿದೆ.



| ಯಾರಿಗೆಲ್ಲಾ ಜೀವಾವಧಿ ಶಿಕ್ಷೆ | |
|---|---|
| ಎ2 | ವಿಕ್ರಂ |
| ಎ3 | ಕೀರ್ತಿಕುಮಾರ್ |
| ಎ4 | ಸಂದೀಪ್ |
| ಎ5 | ವಿನಾಯಕ |
| ಎ6 | ಮಹಾಬಲೇಶ್ವರ |
| ಎ7 | ಸಂತೋಷ |
| ಎ8 | ದಿನೇಶ್ |
| ಎ9 | ಅಶ್ವಥ್ |
| ಎ10 | ಸುನೀಲ್ |
| ಎ11 | ನಜೀರ್ ಅಹ್ಮದ್ |
| ಎ12 | ಶಾನವಾಝ್ |
| ಎ13 | ನೂತನ್ |
| ಎ14 | ಹರ್ಶಿತ್ |
| ಎ15 | ವಿನಯ ಕುಲಕರ್ಣಿ |
| ಎ16 | ಚಂದ್ರಶೇಖರ್ ಇಂಡಿ |
| ಎ18 | ವಿಕಾಸ್ ಕಲಬುರಗಿ |

### ಶಾಸಕ ಸ್ಥಾನ ರದ್ದು

ಜಿಪಂ ಮಾಜಿ ಸದಸ್ಯ ಯೋಗೀಶ್ ಗೌಡ ಕೊಲೆ ಪ್ರಕರಣದಲ್ಲಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಕಾಂಗ್ರೆಸ್ ಶಾಸಕ ವಿನಯ್ ಕುಲಕರ್ಣಿಗೆ ಜೀವಾವಧಿ ಶಿಕ್ಷೆ ವಿಧಿಸಿದೆ.



ಈ ಹಿನ್ನೆಲೆ ಅವರ ಶಾಸಕ ಸ್ಥಾನ ರದ್ದಾಗಿದೆ. ಶಾಸಕರು ಸೇರಿದಂತೆ 16 ಮಂದಿಯನ್ನು ದೋಷಿ ಎಂದು ತೀರ್ಪು ಪ್ರಕಟಿಸಿದ್ದ ಕೋರ್ಟ್ ಶುಕ್ರವಾರ ಶಿಕ್ಷೆಯ ಅವಧಿ ಪ್ರಕಟಿಸಿದೆ. ಶಿಕ್ಷೆಗೆ ಗುರಿಯಾದ ಹಿನ್ನೆಲೆ ಜನಪ್ರತಿನಿಧಿಗಳ ಕಾಯ್ದೆಯ ಸೆಕ್ಷನ್ 8(4)ರ ಪ್ರಕಾರ ತಕ್ಷಣದಿಂದಲೇ ವಿನಯ್ ಕುಲಕರ್ಣಿ ಅವರ ಶಾಸಕ ಸ್ಥಾನ ರದ್ದಾಗಿದೆ.

### ಬಸವರಾಜ ಕೊರವರ್ ಮನೆಗೆ ಭದ್ರತೆ

ಕೋರ್ಟ್ ತೀರ್ಪು ಹಿನ್ನೆಲೆಯಲ್ಲಿ ಆರ್‌ಟಿಐ ಕಾರ್ಯಕರ್ತ ಬಸವರಾಜ ಕೊರವರ್ ಧಾರವಾಡದ ಮನೆಗೆ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿದೆ. ಯೋಗೇಶ್ ಗೌಡ ಕೊಲೆ ಪ್ರಕರಣಲ್ಲಿ ಬಸವರಾಜ್ ಕೊರವರ್ ಪ್ರಮುಖ ಪಾತ್ರ ನಿರ್ವಹಿಸಿದ್ದರು. ಹೀಗಾಗಿ 10 ಕ್ಕೂ ಅಧಿಕ ಪೊಲೀಸರಿಂದ ಭದ್ರತೆ ನೀಡಲಾಗಿದೆ.

### ಸಿಬಿಐ ತನಿಖೆಯಲ್ಲಿ ಇದು ರಾಜಕೀಯ ಪ್ರೇರಿತ ಕೊಲೆ

ಆರು ಜನರ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಆದ್ರೆ, ಕೊಲೆಯಾದ ಯೋಗೇಶ್ ಗೌಡ ಕುಟುಂಬದ ಸದಸ್ಯರ ಒತ್ತಾಯದ ಮೇರೆಗೆ 2019ರಲ್ಲಿ ಈ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಲಾಗಿತ್ತು. ಬಳಿಕ ಸಿಬಿಐ ತನಿಖೆಯಲ್ಲಿ ಇದು ರಾಜಕೀಯ ಪ್ರೇರಿತ ಕೊಲೆ ಎಂದು ಹೇಳಿತ್ತು. ಅಲ್ಲಿಂದ ಈ ಪ್ರಕರಣ ರಾಜಕೀಯ ತಿರುವು ಪಡೆದುಕೊಂಡಿತ್ತು.

ಈ ಕೊಲೆಯಲ್ಲಿ ಶಾಸಕ ವಿನಯ್ ಕುಲಕರ್ಣಿ ಕೈವಾಡವಿರುವ ಅನುಮಾನ ವ್ಯಕ್ತವಾಗಿತ್ತು. 2020ರ ನವೆಂಬರ್ 5ರಂದು ಸಿಬಿಐ ಅಧಿಕಾರಿಗಳು, ವಿನಯ್ ಕುಲಕರ್ಣಿ ಅವರನ್ನು ಬಂಧಿಸಿದ್ದರು. ಈ ಪ್ರಕರಣದಲ್ಲಿ ವಿನಯ್ ಕುಲಕರ್ಣಿ ಸೇರಿ ಒಟ್ಟು 21 ಮಂದಿ ಆರೋಪಿಗಳ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಟ್ಟಿ ಸಲ್ಲಿಸಿದ್ದರು. ಇದರ ನಂತರ ವಿನಯ್ ಕುಲಕರ್ಣಿ ಜಾಮೀನು ಪಡೆದು ಹೊರಗೆ ಬಂದಿದ್ದರು. ನಂತರದಲ್ಲಿ ಈ ಪ್ರಕರಣವನ್ನು ಜನಪ್ರತಿನಿಧಿ ಕೋರ್ಟ್‌ಗೆ ನೀಡಲಾಗಿತ್ತು, ಇದೀಗ ಅವರಿಗೆ ಶಿಕ್ಷೆಯನ್ನು ಘೋಷಣೆ ಮಾಡಿದೆ.

## ಕ್ಷೇತ್ರ ಪುನರ್ ವಿಂಗಡಣೆ ಮಸೂದೆ: ಕರ್ನಾಟಕದದಲ್ಲಿ ಪರ –ವಿರೋಧ ಚರ್ಚೆ

• ಬೆಂಗಳೂರು

ಕೇಂದ್ರ ಸರ್ಕಾರ ಜಾರಿಗೆ ತರಲು ಹೊರಟ ಕ್ಷೇತ್ರ ಪುನರ್ ವಿಂಗಡಣೆ ಮಸೂದೆಯ ಬಗ್ಗೆ ಕರ್ನಾಟಕದದಲ್ಲೂ ಪರ –ವಿರೋಧ ಚರ್ಚೆ ನಡೆಯುತ್ತದೆ. ''ರಾಜಕೀಯ ಲಾಭಕ್ಕಾಗಿ ಯಾವುದೇ ಸ್ಪಷ್ಟನೆ ಇಲ್ಲದೇ ಈ ನಿರ್ಧಾರವನ್ನು ಬಿಜೆಪಿ ತೆಗೆದುಕೊಳ್ಳುತ್ತಿದೆ. ಇದು ಒಳ್ಳೆಯದಲ್ಲ'' ಎಂದು ಡಿಸಿಎಂ ಡಿಕೆ ಶಿವಕುಮಾರ್ ಈ ಬಗ್ಗೆ ಪ್ರತಿಕ್ರಿಯೆ ನೀಡಿದ್ದಾರೆ. ಮತ್ತೊಂದು ಕಡೆಯಲ್ಲಿ ಬಿಜೆಪಿ ಈ ಮಸೂದೆಯನ್ನು ಸಮರ್ಥಿಸಿಕೊಂಡಿದೆ. '' ಕಾಂಗ್ರೆಸ್ ಸುಳ್ಳು ನರೇಟಿವ್ ಸೃಷ್ಟಿಸುವ ಕೆಲಸವನ್ನು ವ್ಯವಸ್ಥಿತವಾಗಿ ನಡೆಸುತ್ತಿದೆ. ಈ ಮೂಲಕ ಜನರನ್ನು ತಪ್ಪು ದಾರಿಯಲ್ಲಿ ನಡೆಸಬೇಕೆಂಬ ಉದ್ದೇಶ ಹೊಂದಿದೆ'' ಎಂದು ಬಿಜೆಪಿ ಶಾಸಕ ಸುನೀಲ್ ವಾಗ್ದಾಳಿ ನಡೆಸಿದ್ದಾರೆ.

**ಕಾಂಗ್ರೆಸ್ ವಾದ ಏನು?:** ಮಹಿಳಾ ಮೀಸಲಾತಿ ಹಾಗೂ ಕ್ಷೇತ್ರ ಪುನರ್ ವಿಂಗಡಣೆ ಬಗ್ಗೆ ಕೇಂದ್ರದ ತರಾತುರಿ ನಿರ್ಧಾರದ ಬಗ್ಗೆ ಕೇಳಿದಾಗ, ಅವರು ಏಕೆ ಆತುರದಲ್ಲಿ ಇದ್ದಾರೆ ಎಂದು ತಿಳಿಯುತ್ತಿಲ್ಲ. ಕಾಂಗ್ರೆಸ್ ಪಕ್ಷವು ಚೌಕಟ್ಟಿನ ಒಳಗೆ ಇದರ ಬಗ್ಗೆ ಸೂಕ್ತ ಚರ್ಚೆ ನಡೆಸಬೇಕು ಎಂದು ಬಯಸುತ್ತದೆ. ರಾಜಕೀಯ ಲಾಭಕ್ಕಾಗಿ ಯಾವುದೇ ಸ್ಪಷ್ಟನೆ ಇಲ್ಲದೇ ಈ ನಿರ್ಧಾರವನ್ನು ಬಿಜೆಪಿ ತೆಗೆದುಕೊಳ್ಳುತ್ತಿದೆ. ಇದು ಒಳ್ಳೆಯದಲ್ಲ ಎಂದು ಡಿಕೆ ಶಿವಕುಮಾರ್ ಪ್ರಶ್ನಿಸಿದ್ದಾರೆ. ಬಿಜೆಪಿಯವರು ಅಭದ್ರತೆ ಎದುರಿಸುತ್ತಿದ್ದಾರೆ. ಅದಕ್ಕೆ ಈ ವಿಚಾರದ ಬಗ್ಗೆ ತರಾತುರಿಯಲ್ಲಿದ್ದಾರೆ. ಸೋನಿಯಾ ಗಾಂಧಿ ಅವರ ನೇತೃತ್ವದಲ್ಲಿ ಈ ಹಿಂದೆ ಈ ಬಗ್ಗೆ ತೀರ್ಮಾನ ಆಗಿತ್ತು. ಕ್ಷೇತ್ರ ಪುನರ್ ವಿಂಗಡಣೆ ಸರಿಯಾದ ಕ್ರಮವಲ್ಲ. ಇದು ಬೇಕಾಗಿಲ್ಲ ಎಂದರು.

### ವಿವಾದಕ್ಕೆ ಕಾರಣವಾಗುತ್ತಿದೆ ಕ್ಷೇತ್ರ ಪುನರ್ ವಿಂಗಡಣೆ ಮಸೂದೆ





**ಡಿಸಿಎಂ ಡಿಕೆಶಿ ಟೀಕೆ**

**ಬಿಜೆಪಿ ವಾದ ಏನು?:** ಕ್ಷೇತ್ರ ಪುನರ್ ವಿಂಗಡಣೆಯಿಂದ ದಕ್ಷಿಣದ ರಾಜ್ಯಗಳಿಗೆ ಅನ್ಯಾಯವಾಗುತ್ತದೆ ಎಂದು ಮೊದಲು ಮುಂಚೂಣಿಯಲ್ಲಿ ನಿಂತು ವಿರೋಧ ವ್ಯಕ್ತಪಡಿಸಿದವರು ಮುಖ್ಯಮಂತ್ರಿ ಸಿದ್ದರಾಮಯ್ಯ. ಅವರನ್ನು ಅನುಸರಿಸಿ ರಾಜ್ಯ ಕಾಂಗ್ರೆಸ್ ನ ಹಲವರು ಸುಳ್ಳು ನರೇಟಿವ್ ಸೃಷ್ಟಿಸುವ ಕೆಲಸವನ್ನು ವ್ಯವಸ್ಥಿತವಾಗಿ ನಡೆಸಿದರು. ಜನರನ್ನು ಒಟ್ಟಾರೆಯಾಗಿ ತಪ್ಪು ದಾರಿಯಲ್ಲಿ ನಡೆಸಬೇಕೆಂಬುದಷ್ಟೇ ಅವರ ಇರಾದೆಯಾಗಿತ್ತು ಎಂದು ಬಿಜೆಪಿ ಶಾಸಕ ಸುನೀಲ್ ಕುಮಾರ್ ವಾಗ್ದಾಳಿ ನಡೆಸಿದ್ದಾರೆ.

ಮಹಿಳಾ ಮೀಸಲಾತಿ ವಿಚಾರದಲ್ಲೂ ಕಾಂಗ್ರೆಸ್ ಇದೇ ನರೇಟಿವ್ ಮೂಲಕ ದಾಳಿ ನಡೆಸುವ ಪ್ರಯತ್ನ ನಡೆಸಿತು. ಆದರೆ ಮಹಿಳಾ ಮೀಸಲಾತಿ ಮತ್ತು ಕ್ಷೇತ್ರ ಮರುವಿಂಗಡಣೆ ಕುರಿತು ಲೋಕಸಭೆಯಲ್ಲಿ ಮಾತನಾಡಿದ ಕೇಂದ್ರ ಗೃಹ ಸಚಿವ ಅಮಿತ್ ಶಾ ಸಂವಿಧಾನ ತಿದ್ದುಪಡಿ ಮಸೂದೆ, ಕ್ಷೇತ್ರ ಮರುವಿಂಗಡಣೆಯ ಎರಡು ಕಾಯ್ದೆಗಳು ಮತ್ತು ಚುನಾವಣಾ ಕಾನೂನಿನ ಬದಲಾವಣೆಗಳು ದಕ್ಷಿಣ ಭಾರತದ ಶಕ್ತಿಯನ್ನು ಕುಂದಿಸುತ್ತವೆ ಎಂಬ ನರೇಟಿವ್‌ನ್ನು ತುಂಡರಿಸಿದ್ದಾರೆ. ಇದು ಸದನದ ಒಟ್ಟು 543 ಸ್ಥಾನಗಳ ಶೇ. 5.15 ರಷ್ಟಿದೆ. ಈ ಮಸೂದೆ ಅಂಗೀಕಾರವಾದ ನಂತರ, ಕರ್ನಾಟಕದ ಸಂಸದರ ಸಂಖ್ಯೆ 28 ರಿಂದ 42 ಕ್ಕೆ ಏರುತ್ತದೆ ಮತ್ತು ಲೋಕಸಭೆಯಲ್ಲಿ ಅದರ ಪಾಲು ಶೇ. 5.44 ಕ್ಕೆ ಹೆಚ್ಚಾಗುತ್ತದೆ. ಕರ್ನಾಟಕಕ್ಕೆ ಯಾವುದೇ ರೀತಿಯ ನಷ್ಟವಾಗುವುದಿಲ್ಲ ಎಂದು ಸಮರ್ಥಿಸಿಕೊಂಡರು.

## ಬ್ರಿಡ್ಜ್ ಟು ಬೆಂಗಳೂರು 2026: ವಿಶ್ವದ ಜೊತೆ ಪಾಲುದಾರಿಕೆ ಹೊಂದಲು ಕರ್ನಾಟಕ ಸನ್ನದ್ಧ

• ಉದಯವಾಹಿನಿ, ಬೆಂಗಳೂರು

ಕರ್ನಾಟಕವು ತಂತ್ರಜ್ಞಾನ ಕೇಂದ್ರದಿಂದ ಜಾಗತಿಕ ನಾವೀನ್ಯತೆಯ ಪ್ರಮುಖ ಪಾಲುದಾರ ತಾಣವಾಗಿ ಅಭಿವೃದ್ಧಿಗೊಂಡಿದ್ದು, ನೀತಿ-ನಿರೂಪಣೆಯ ನೆರವು, ನವೋದ್ಯಮಗಳನ್ನು ಜಾಗತಿಕ ಮಟ್ಟಕ್ಕೆ ಬೆಳೆಸಲು ಅಗತ್ಯ ಬೆಂಬಲ, ಸಂಶೋಧನಾ ಸಹಯೋಗ ಮತ್ತು ಮಾರುಕಟ್ಟೆ ಲಭ್ಯತೆ ಅವಕಾಶಗಳನ್ನು ಒದಗಿಸುವ ಮೂಲಕ, ಹೂಡಿಕೆದಾರರು ಮತ್ತು ಉದ್ಯಮಿಗಳಿಗೆ ಆಕರ್ಷಕ ಕೇಂದ್ರವಾಗಿ ಹೊರಹೊಮ್ಮುತ್ತಿದೆ ಎಂದು ವಿವಿಧ ದೇಶಗಳ ರಾಜತಾಂತ್ರಿಕರು ಬಣ್ಣಿಸಿದ್ದಾರೆ.

ಕರ್ನಾಟಕ ರಾಜ್ಯ ಸರ್ಕಾರವು ಶುಕ್ರವಾರ ಇಲ್ಲಿ ಆಯೋಜಿಸಿದ್ದ ಬ್ರಿಡ್ಜ್ ಟು ಬೆಂಗಳೂರು 2026 ರಾಜತಾಂತ್ರಿಕರ ಜೊತೆ ಸಂವಾದ' ಕಾರ್ಯಕ್ರಮದಲ್ಲಿ ಮಾತನಾಡಿದ ರಾಜತಾಂತ್ರಿಕರು ಬೆಂಗಳೂರಿಗೆ ಸೇತುವೆ ಉಪಕ್ರಮದ ಮೂಲಕ ಕರ್ನಾಟಕವನ್ನು ಹೊಸ ಎತ್ತರಕ್ಕೆ ಕೊಂಡೊಯ್ಯಲು ರಚನಾತ್ಮಕವಾಗಿ ಕಾರ್ಯೋನ್ಮುಖವಾಗಿರುವುದನ್ನು ಶ್ಲಾಘಿಸಿದರು.

ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾತನಾಡಿ, ವಿಶ್ವದ ಜೊತೆ ಪಾಲುದಾರಿಕೆ ಹೊಂದಲು ಕರ್ನಾಟಕವು ಸನ್ನದ್ಧವಾಗಿದ್ದು ತಂತ್ರಜ್ಞಾನ ಕ್ಷೇತ್ರದ ಜೊತೆಗೆ ವ್ಯಾಪಾರ, ನಾವೀನ್ಯತೆ ಮತ್ತು ಜನರ ಜೊತೆಗಿನ ಪಾಲುದಾರಿಕೆಗೂ ತೀವ್ರ ಆಸಕ್ತಿ ಹೊಂದಿದೆ ಎಂದರು. ಕರ್ನಾಟಕವು ಜಾಗತಿಕ ನಾವೀನ್ಯತಾ ಕೇಂದ್ರ ಮತ್ತು ಹೂಡಿಕೆಯ ಆದ್ಯತಾ ತಾಣವಾಗಿರುವುದನ್ನು ಪ್ರಮುಖವಾಗಿ ಪ್ರಸ್ತಾಪಿಸಿದ ಉಪ ಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್ ಅವರು, ಬೆಂಗಳೂರು ಕೇವಲ ಭೇಟಿ ನೀಡುವ ನಗರವಲ್ಲ. ಕನಸುಗಳನ್ನು ಕಟ್ಟಿಕೊಳ್ಳುವ, ಭವಿಷ್ಯ ರೂಪಿಸುವ ನಗರವಾಗಿದೆ. ಎಲ್ಲರನ್ನೂ, ಎಲ್ಲದನ್ನೂ ಸ್ವಾಗತಿಸುವ ಅದರ ಮುಕ್ತ ಧೋರಣೆ, ಸದೃಢ ಪರಿಸರ ವ್ಯವಸ್ಥೆ ಮತ್ತು ಉತ್ತಮ ಜೀವನಮಟ್ಟದಿಂದ ಜಾಗತಿಕ ಪ್ರತಿಭೆ, ನಾವೀನ್ಯತೆ ಹಾಗೂ ಹೂಡಿಕೆಗಳನ್ನು ನಿರಂತರವಾಗಿ ಸೆಳೆಯುತ್ತಾ, ಅವಕಾಶಗಳ ನಗರವಾಗಿ ಮುಂದುವರಿಯುತ್ತಿದೆ ಎಂದರು.

### ■ ಜಾಗತಿಕ ನಾವೀನ್ಯತಾ ಮೈತ್ರಿಕೂಟದ ಪರಿಷ್ಕೃತ ಉಪಕ್ರಮ (ಜಿಐಎ 2.0) ಅನಾವರಣ






**ಏನಂದ್ರು ಪ್ರಿಯಾಂಕ್ ಖರ್ಗೆ**

ನಾವೀನ್ಯತೆ ನೇತೃತ್ವದಲ್ಲಿನ ಬೆಳವಣಿಗೆ ಮತ್ತು ಅಂತರರಾಷ್ಟ್ರೀಯ ಪಾಲುದಾರಿಕೆ ಕುರಿತು ಮಾತನಾಡಿದ ಐಟಿ, ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ಅವರು, ಕರ್ನಾಟಕವು ಬಂಡವಾಳ ಹೂಡಿಕೆಗಷ್ಟೇ ಸೀಮಿತವಾದ ಸುಪ್ತ ಪಾಲುದಾರಿಕೆಯಲ್ಲಿ ಆಸಕ್ತಿ ಹೊಂದಿರದೆ, ದೀರ್ಘಾವಧಿಯ, ನಿರ್ದಿಷ್ಟ ಫಲಿತಾಂಶ ಆಧಾರಿತ ನಾವೀನ್ಯತೆಯ ಸಹಯೋಗಗಳನ್ನು ಕಾರ್ಯಗತಗೊಳಿಸಲು ನೆರವಾಗುವ ಪಾಲುದಾರರ ಹುಡುಕಾಟದಲ್ಲಿ ಇದೆ ಎಂದರು.

**ಯಶಸ್ವಿ ಸಂವಾದ ಕಾರ್ಯಕ್ರಮ:** ಕರ್ನಾಟಕ ರಾಜ್ಯ ಸರ್ಕಾರವು ಇಂದು ನವದೆಹಲಿಯಲ್ಲಿ ಹಮ್ಮಿಕೊಂಡಿದ್ದ 'ಬ್ರಿಡ್ಜ್ ಟು ಬೆಂಗಳೂರು 2026 ರಾಜತಾಂತ್ರಿಕರ ಜೊತೆ ಸಂವಾದ' ಕಾರ್ಯಕ್ರಮವು ಯಶಸ್ವಿಯಾಗಿ ನೆರವೇರಿತು. ಇದು ತಂತ್ರಜ್ಞಾನ, ನಾವೀನ್ಯತೆ ಮತ್ತು ಜಾಗತಿಕ ಸಹಭಾಗಿತ್ವಗಳ ಮೇಲೆ ಕೇಂದ್ರೀಕೃತವಾಗಿದ್ದ, ರಾಜ್ಯ ಸರ್ಕಾರದ ನೇತೃತ್ವದಲ್ಲಿ ನಡೆದ ಭಾರತದ ಅತ್ಯಂತ ಪ್ರಮುಖ ರಾಜತಾಂತ್ರಿಕ ಕಾರ್ಯಕ್ರಮಗಳಲ್ಲಿ ಒಂದಾಗಿದೆ.

ಈ ಉನ್ನತ ಮಟ್ಟದ ಸಂವಾದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್, ದೊಡ್ಡ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವ ಎಂ.ಬಿ ಪಾಟೀಲ ಮತ್ತು ಎಲೆಕ್ಟ್ರಾನಿಕ್ಸ್, ಐಟಿ, ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ, ವಿವಿಧ ಇಲಾಖೆಯ ಉನ್ನತ ಅಧಿಕಾರಿಗಳು ಮತ್ತು ಜಾಗತಿಕ ಉದ್ಯಮ ದಿಗ್ಗಜರು ಭಾಗವಹಿಸಿದ್ದರು.

45ಕ್ಕೂ ಹೆಚ್ಚು ರಾಯಭಾರಿಗಳು ಮತ್ತು ಹೈಕಮಿಷನರ್‌ಗಳು ಸೇರಿದಂತೆ 80ಕ್ಕೂ ಹೆಚ್ಚು ದೇಶಗಳ ಹಿರಿಯ ರಾಜತಾಂತ್ರಿಕ ಪ್ರತಿನಿಧಿಗಳೂ ಕಾರ್ಯಕ್ರಮದಲ್ಲಿ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ಜಾಗತಿಕ ಸಂಸ್ಥೆಗಳು ಮತ್ತು ಕೈಗಾರಿಕೆ ಮತ್ತು ಸರ್ಕಾರದ ಹಿರಿಯ ಪಾಲುದಾರರನ್ನು ಒಳಗೊಂಡ 140ಕ್ಕೂ ಹೆಚ್ಚು ಜನರು ಪಾಲ್ಗೊಂಡಿದ್ದರು. ಅಂತರರಾಷ್ಟ್ರೀಯ ಪ್ರಮುಖ ವ್ಯಾಪಾರ ಮತ್ತು ಹೂಡಿಕೆ ಸಂಸ್ಥೆಗಳ ಭಾಗವಹಿಸುವಿಕೆಯೂ ಗಮನ ಸೆಳೆಯಿತು.

ಇದು ಸರ್ಕಾರದಿಂದ ಸರ್ಕಾರಕ್ಕೆ ಮತ್ತು ವಾಣಿಜ್ಯ ವಹಿವಾಟಿನಿಂದ ಸರ್ಕಾರದ ಜೊತೆಗಿನ ಸಹಯೋಗವನ್ನು ಕಾರ್ಯಗತಗೊಳಿಸುವ ಪ್ರಕ್ರಿಯೆಯನ್ನು ಮತ್ತಷ್ಟು ಬಲಪಡಿಸಿತು.

ಸ್ವಿಟ್ಜರ್ಲೆಂಡ್, ಸೌದಿ ಅರೇಬಿಯಾ, ಡೆನ್ಮಾರ್ಕ್, ಫ್ರಾನ್ಸ್, ಈಜಿಪ್ಟ್, ಮಲೇಷ್ಯಾ, ಜಪಾನ್, ಜರ್ಮನಿ ಹಾಗೂ ಭೂತಾನ್ ಸೇರಿದಂತೆ ಪ್ರಮುಖ ಪಾಲುದಾರ ರಾಷ್ಟ್ರಗಳ ರಾಜತಾಂತ್ರಿಕ ಪ್ರತಿನಿಧಿಗಳು ಸಂವಾದದಲ್ಲಿ ಭಾಗವಹಿಸಿದ್ದರು. ಹಲವಾರು ರಾಯಭಾರಿಗಳು ಮತ್ತು ಪ್ರತಿನಿಧಿಗಳು ಮಾತನಾಡಿ ಕರ್ನಾಟಕದ ಜೊತೆಗಿನ ವಿವಿಧ ದೇಶಗಳ ಗಾಢವಾದ ಮತ್ತು ಬೆಳೆಯುತ್ತಿರುವ ಪಾಲುದಾರಿಕೆಯ ಮೇಲೆ ಬೆಳಕು ಚೆಲ್ಲಿದರು.

ಜಾಗತಿಕ ನಾವೀನ್ಯತಾ ಮೈತ್ರಿಕೂಟ (ಜಿಐಎ) –ದಂತಹ ರಚನಾತ್ಮಕ ವೇದಿಕೆಗಳ ಮೂಲಕ ಭಾರತದ ನಾವೀನ್ಯತೆ ವ್ಯವಸ್ಥೆಯ ಜೊತೆ ಗಾಢ ಸಂಬಂಧವನ್ನು ಕಾರ್ಯಗತಗೊಳಿಸಲು ರಾಜ್ಯ ಸರ್ಕಾರ ಕೈಗೊಂಡ ಕ್ರಮಗಳನ್ನು ಶ್ಲಾಘಿಸಿದರು. ಕರ್ನಾಟಕವು 18,000ಕ್ಕೂ ಹೆಚ್ಚು ನವೋದ್ಯಮಗಳು ಮತ್ತು 570 ಕ್ಕೂ ಹೆಚ್ಚು ಜಾಗತಿಕ ಸಾಮರ್ಥ್ಯ ಕೇಂದ್ರಗಳಿಗೆ ನೆಲೆಯಾಗಿದೆ. ಇದು ವಿಶ್ವದ ಪ್ರಮುಖ ನಾವೀನ್ಯತೆ, ಸಂಶೋಧನೆ ಮತ್ತು ಅಭಿವೃದ್ಧಿ ಪರಿಸರ ವ್ಯವಸ್ಥೆಗಳಲ್ಲಿ ಒಂದಾಗಿ ತನ್ನ ಸ್ಥಾನವನ್ನು ಬಲಪಡಿಸಿಕೊಂಡಿದೆ.

### ಜಿಐಎ 2.0 ಮೂಲಕ ಜಾಗತಿಕ ಪಾಲುದಾರಿಕೆ ಬಲಪಡಿಸುವಿಕೆ

ವಿದೇಶಿ ರಾಜತಾಂತ್ರಿಕರ ಜೊತೆಗಿನ ಬ್ರಿಡ್ಜ್ ಟು ಬೆಂಗಳೂರು ಸಂವಾದ ಕಾರ್ಯಕ್ರಮವು ಜಾಗತಿಕ ನಾವೀನ್ಯತಾ ಮೈತ್ರಿಕೂಟದ (ಜಿಐಎ) ಪರಿಷ್ಕೃತ 2.0 ನೀತಿ ಅನಾವರಣಗೊಳಿಸಲು ಜಾಗತಿಕ ಪ್ರದರ್ಶನ ವೇದಿಕೆಯಾಗಿ ಕಾರ್ಯನಿರ್ವಹಿಸಿತು.ಸರ್ಕಾರಗಳು, ರಾಜತಾಂತ್ರಿಕರು, ನವೋದ್ಯಮಗಳು, ಉದ್ದಿಮೆ ದಿಗ್ಗಜರು ಮತ್ತು ಸಂಶೋಧನಾ ಸಂಸ್ಥೆಗಳನ್ನು ಒಂದೆಡೆ ಒಗ್ಗೂಡಿಸಿ ಹೊಸ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಸಹಕಾರ ವೃದ್ಧಿಸಲು ಈ ಜಿಐಎ 2.0 ರೂಪಿಸಲಾಗಿದೆ.

**ಈ ದಿನದ ದರ** ಪೆಟ್ರೋಲ್: 102.96 ₹/L ಡೀಸೆಲ್ : 91.06 ₹/L ಬಂಗಾರ: ₹15,420/Gram24ct ₹14,135/Gram22ct ಬೆಳ್ಳಿ: ₹265.00/Gram

## ಅಂತರಾಳದಿಂದ.. EDITORIAL

# ಬಯಲು ಶೌಚ ಮುಕ್ತ ಕರ್ನಾಟಕ ಘೋಷಣೆಯ ಹುಳುಕು ಬಯಲು



ಕರ್ನಾಟಕ ರಾಜ್ಯವು ಬಯಲು ಬಹಿರ್ದೆಸೆಮುಕ್ತ ರಾಜ್ಯವಾಗಿದೆ, ಇತರ ರಾಜ್ಯಗಳಿಗೆ ಮಾದರಿಯಾಗಿದೆ ಎಂದು ಹೇಳಿಕೊಳ್ಳುತ್ತಿದೆ. ಆದರೆ ತಳಮಟ್ಟದಲ್ಲಿ ಪರಿಸ್ಥಿತಿ ಬೇರೆಯೇ ಇದೆ. ಆ್ಯಕ್ಷನ್ ಏಡ್ ಕರ್ನಾಟಕ ಸಂಸ್ಥೆಯು ಇತ್ತೀಚೆಗೆ ನಡೆಸಿದ ಸಮೀಕ್ಷೆಯೊಂದು ಈ ವಿರೋಧಾಭಾಸವನ್ನು ಬಯಲಾಗಿಸಿದೆ. ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನಲ್ಲಿ ಸಮೀಕ್ಷೆ ಮಾಡಲಾದ ಪರಿಶಿಷ್ಟ ಜಾತಿಗೆ ಸೇರಿದ ಶೇ 50ಕ್ಕೂ ಹೆಚ್ಚು ಮನೆಗಳಲ್ಲಿ ಶೌಚಾಲಯ ಇಲ್ಲ. ಆದರೆ ಈ ಜಿಲ್ಲೆಯು ಬಯಲು ಬಹಿರ್ದೆಸೆ ಮುಕ್ತ ಎಂದು ಏಳು ವರ್ಷಗಳ ಹಿಂದೆಯೇ ಘೋಷಿಸಲಾಗಿದೆ. ಹಲವು ಗ್ರಾಮಗಳಲ್ಲಿ ಸಮುದಾಯ ಶೌಚಾಲಯಗಳು ಕೂಡ ಇಲ್ಲ. ಮಹಿಳೆಯರು ಬಯಲಿನಲ್ಲಿಯೇ ಬಹಿರ್ದೆಸೆಗೆ ಹೋಗಬೇಕಾದ ಶೋಚನೀಯ ಸ್ಥಿತಿ ಇದೆ. ಇದು ಮಹಿಳೆಯರ ಘನತೆಗೆ ಕುತ್ತು ತರುವುದರ ಜೊತೆಗೆ ಅವರನ್ನು ಅಪಾಯಕ್ಕೂ ಒಡ್ಡುತ್ತಿದೆ. ಇದು ಮೂಲಸೌಕರ್ಯ ಅಭಿವೃದ್ಧಿಯ ವೈಫಲ್ಯ ಮಾತ್ರವೆಂದು ನೋಡಲಾಗದು. ಸರಾಸರಿ ಯಶಸ್ಸಿನ ಲೆಕ್ಕಾಚಾರವು ನಮ್ಮ ವ್ಯವಸ್ಥೆಯಲ್ಲಿ ಹಾಸುಹೊಕ್ಕಾಗಿರುವ ಅಸಮಾನತೆಯನ್ನು ಹೇಗೆ ಮುಚ್ಚಿಡುತ್ತದೆ ಎಂಬುದರ ಉದಾಹರಣೆಯೂ ಹೌದು. ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಸೇರಿದವರು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಶೋಷಣೆಗೆ ಒಳಗಾದವರು. ಈಗ ಬಯಲು ಬಹಿರ್ದೆಸೆ ಮುಕ್ತ ಯೋಜನೆಯ ಸೌಲಭ್ಯ ಪಡೆದುಕೊಳ್ಳುವಲ್ಲಿಯೂ ಹಿಂದೆ ಬಿದ್ದಿದ್ದಾರೆ. ಈ ಸಮುದಾಯದಲ್ಲಿ ಬಯಲು ಬಹಿರ್ದೆಸೆ ಸಮಸ್ಯೆ ಈಗಲೂ ಇರುವುದು ಯೋಜನೆಯ ಅನುಷ್ಠಾನದ ಲೋಪ ಅಷ್ಟೇ ಅಲ್ಲ. ಯೋಜನೆ ಅನುಷ್ಠಾನ ಮಾಡುವಲ್ಲಿ ಇದ್ದ ಸಮಸ್ಯೆಗಳನ್ನು ಗಣನೆಗೆ ತೆಗೆದುಕೊಳ್ಳುವಲ್ಲಿ ಸರ್ಕಾರ ವಿಫಲವಾಗಿದೆ ಎಂಬುದನ್ನೂ ಇದು ಸೂಚಿಸುತ್ತದೆ. ಒತ್ತೊತ್ತಾಗಿರುವ ಮನೆಗಳು, ನೀರು ಪೂರೈಕೆಯಲ್ಲಿ ಸಮಸ್ಯೆ, ಸೌಲಭ್ಯಗಳ ಕುರಿತು ಜನರಿಗೆ ಅರಿವು ಇಲ್ಲ ಎಂಬುದರತ್ತ ಸರ್ಕಾರವು ಗಮನವನ್ನೇ ಹರಿಸಿಲ್ಲ ಎಂಬುದು ಈಗ ಬಯಲಾಗಿದೆ. ಈಗ, ರಾಜ್ಯವು ಶೇಕಡ ನೂರರಷ್ಟು ಬಯಲು ಬಹಿರ್ದೆಸೆ ಮುಕ್ತವಾಗಿದೆ ಎಂಬ ಘೋಷಣೆಯನ್ನು ಸಂದೇಹದಿಂದಲೇ ನೋಡಬೇಕಾಗಿದೆ. ಇಂತಹ ಘೋಷಣೆಗಳು ಮುಖ್ಯವಾಗಿ ಆಡಳಿತಾತ್ಮಕ ವರದಿಗಳು ಮತ್ತು ಸ್ವಯಂಘೋಷಣೆಯ ಮೇಲೆ ಅವಲಂಬಿತವಾಗಿರುತ್ತವೆ. ಕಟ್ಟುನಿಟ್ಟಾದ ಮತ್ತು ಸ್ವತಂತ್ರವಾದ ಮರುಪರಿಶೀಲನಾ ವ್ಯವಸ್ಥೆ ಅಲ್ಲಿ ಸಾಮಾನ್ಯವಾಗಿ ಇರುವುದೇ ಇಲ್ಲ. ಶೋಷಿತ ಸಮುದಾಯಗಳಿಗೆ ಸೇರಿದ ಜನರ ಶೇಕಡ 50ರಷ್ಟು ಮನೆಗಳಲ್ಲಿ ಶೌಚಾಲಯ ಇಲ್ಲ ಎಂಬುದು ಸರ್ಕಾರ ನೀಡುವ ಅಂಕಿ ಸಂಖ್ಯೆಗಳನ್ನು ಪ್ರಶ್ನಿಸುವಂತೆ ಮಾಡುತ್ತದೆ. ಯೋಜನೆಯ ಅನುಷ್ಠಾನದಲ್ಲಿ ಇಂತಹ ಲೋಪ ಆಗಿರುವ ಪ್ರದೇಶ ಕೂಡ ಬಹಳಷ್ಟನ್ನು ಹೇಳುತ್ತದೆ. ಬೆಳಗಾವಿಯು ರಾಜ್ಯದ ಅತ್ಯಂತ ದೊಡ್ಡ ಜಿಲ್ಲೆ ಮತ್ತು ರಾಜಕೀಯವಾಗಿ ಪ್ರಭಾವಿಯಾಗಿರುವ ಜಿಲ್ಲೆ. ಜಾರಕಿಹೊಳಿ, ಕತ್ತಿ, ಹೆಬ್ಬಾಳಕರ, ಜೊಲ್ಲೆ, ಕೋರೆ ಮತ್ತು ಸವದಿಯಂತಹ ರಾಜಕೀಯ ಕುಟುಂಬಗಳ ಪ್ರಾಬಲ್ಯ ಇಲ್ಲಿ ಇದೆ. ಯಾವುದೇ ಪಕ್ಷ ಅಧಿಕಾರದಲ್ಲಿರುವಾಗಲೂ ಈ ಕುಟುಂಬಗಳ ಕೆಲವರು ಅಧಿಕಾರ ಸ್ಥಾನಗಳಲ್ಲಿ ಇರುತ್ತಾರೆ. ರಾಜಕೀಯವಾಗಿ ಇಷ್ಟೊಂದು ಪ್ರಾಬಲ್ಯ ಹೊಂದಿರುವ ಜಿಲ್ಲೆಯಲ್ಲಿ ಯೋಜನೆ ಅನುಷ್ಠಾನದಲ್ಲಿ ಆಗಿರುವ ಲೋಪವು ರಾಜಕೀಯ ಪ್ರಭಾವ ಮತ್ತು ಸಮಾನ ಅಭಿವೃದ್ಧಿಯ ನಡುವೆ ಪರಸ್ಪರ ಸಂಪರ್ಕ ಇಲ್ಲ ಎಂಬುದನ್ನು ತೋರಿಸಿಕೊಟ್ಟಿದೆ. ರಾಜಕೀಯವಾಗಿ ಹೆಚ್ಚು ಪ್ರಭಾವಿಯಲ್ಲದ, ಹೆಚ್ಚು ಹಿಂದುಳಿದಿರುವ ಜಿಲ್ಲೆಗಳಲ್ಲಿ ಯೋಜನೆಯ ಅನುಷ್ಠಾನ ಕಳಪೆಯಾಗಿರಬಹುದು ಎಂಬ ಪ್ರಶ್ನೆ ಈಗ ಮೂಡುತ್ತದೆ. ಒಟ್ಟು ಆಂತರಿಕ ಉತ್ಪನ್ನ ಮತ್ತು ತಲಾ ಆದಾಯದಲ್ಲಿ ಮುಂದೆ ಇದ್ದೇವೆ ಎಂದು ಹೇಳಿಕೊಳ್ಳುವ ರಾಜ್ಯದಲ್ಲಿ ಇರುವ ಇಂತಹ ಸ್ಥಿತಿಯನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಈ ವಾಸ್ತವವನ್ನು ಬದಲಿಸಲು ಕೇವಲ ಗುರಿಗಳನ್ನು ಪುನರುಚ್ಚರಿಸಿದರೆ ಸಾಲದು. ಮೊದಲಿಗೆಬಯಲು ಶೌಚ ಮುಕ್ತ ಘೋಷಣೆಗಳ ಕುರಿತಾಗಿ ಸಮುದಾಯಗಳ ನಡುವಣ ಅಸಮಾನತೆಯನ್ನು ಕೇಂದ್ರವಾಗಿರಿಸಿಕೊಂಡು ಸ್ವತಂತ್ರ ಮತ್ತು ವಿಶ್ವಾಸಾರ್ಹವಾದ ಲೆಕ್ಕಪರಿಶೋಧನೆ ನಡೆಸಬೇಕು.

ಎರಡನೆಯದಾಗಿ ಸ್ವಚ್ಛತೆ ಎಂಬುದನ್ನು ಶೌಚಾಲಯಗಳ ನಿರ್ಮಾಣಕ್ಕೆ ಸೀಮಿತಗೊಳಿಸದೆ, ನೀರಿನ ನಿರಂತರ ಪೂರೈಕೆ, ಸಣ್ಣ ಮನೆಗಳಿಗೂ ಹೊಂದುವಂತಹ ಸಣ್ಣ ಶೌಚಾಲಯಗಳ ವಿನ್ಯಾಸ, ಸಮುದಾಯ ಶೌಚಾಲಯಗಳ ಸ್ವಚ್ಛತೆಯನ್ನು ಖಚಿತಪಡಿಸುವ ಮೂಲಕ ಅವುಗಳ ಬಳಕೆಯನ್ನು ಸಾಧ್ಯವಾಗಿಸಬೇಕು. ಮೂರನೆಯದಾಗಿ ಶೌಚಾಲಯ ನಿರ್ಮಾಣಕ್ಕಾಗಿ ಲಭ್ಯವಿರುವ ಸಹಾಯಧನ ಮತ್ತು ಯೋಜನೆಗಳ ಕುರಿತಾಗಿ ಇರುವ ಅರಿವಿನ ಕೊರತೆಯನ್ನು ನೀಗಿಸಲು, ಮುಖ್ಯವಾಗಿ ಶೋಷಿತ ಸಮುದಾಯಗಳಲ್ಲಿ ಜಾಗೃತಿ ಮೂಡಿಸಲು ಅಭಿಯಾನವನ್ನು ನಡೆಸಬೇಕು. ಕಡೆಯದಾಗಿ ಕೊನೆಯ ವ್ಯಕ್ತಿಗೂ ಈ ಸವಲತ್ತು ತಲುಪುವಂತೆ ಮಾಡುವಲ್ಲಿ ಸ್ಥಳೀಯ ಮಟ್ಟದಲ್ಲಿ, ಅಂದರೆ ಪಂಚಾಯಿತಿ ಮತ್ತು ಸಮುದಾಯ-ಸಂಘಟನೆಗಳ ಮಟ್ಟದಲ್ಲಿ ಹೊಣೆಗಾರಿಕೆಯನ್ನು ನಿಗದಿಪಡಿಸಬೇಕು. ಶೌಚಾಲಯ ಸವಲತ್ತಿನಿಂದ ಹಲವರು ಹೊರಗುಳಿದಿರುವ ಸಂದರ್ಭದಲ್ಲಿ ಬಯಲು ಶೌಚ ಮುಕ್ತ ಎಂದು ಘೋಷಿಸಲಾಗದು. ಕಟ್ಟಕಡೆಯ ದುರ್ಬಲ ಕುಟುಂಬಕ್ಕೂ ಶೌಚಾಲಯ ದೊರೆಯದ ಹೊರತು 'ಬಯಲು ಶೌಚ ಮುಕ್ತ' ಎಂಬುದು ಕೇವಲ ದತ್ತಾಂಶವಷ್ಟೇ, ವಾಸ್ತವವಲ್ಲ.




## ಸುಂದರಕಾಂಡ

• ಹಿಂದಿನ ಸಂಚಿಕೆಯಿಂದ

ಗಿರಿಜಾತೆಯೇ ಕೇಳು, ದಿನನಾಥನು ಉದಯಾದ್ರಿಯನ್ನು ಏರಿದಂತೆ ಮಾರುತಿಯು ಮಹೇಂದ್ರಪರ್ವತದ ಶಿಖರವನ್ನು ಹತ್ತಿ, ಎದುರಿಗಿದ್ದ ಸಮುದ್ರವನ್ನು ಎರಡನೆಯ ಅಗಸ್ತ್ಯನೋ ಎಂಬಂತೆ ನೋಡಿದ, ಕೆಳಗಿದ್ದ ಜಾಂಬವಾದಿಗಳು ಹರ್ಷೋದ್ಗಾರ ಮಾಡಿದರು.

ಆಂಜನೇಯನು ಹತ್ತುವ ರಭಸದಿಂದಾಗಿ ಶೈಲವೇ ಅದುರಿತು, ಹುಲಿ ಮದಕರಿ ಸಿಂಹ ಚಮರ ಮುಂತಾದ ಮೃಗಗಳೆಲ್ಲ ಭಯದಿಂದ ಚದುರಿಹೋದವು, ಕ್ರೀಡಿಸಲೆಂದು ಗುಹೆಗಳಲ್ಲಿ ಸೇರಿದ್ದ ಗಂಧರ್ವಕಿನ್ನರ ಯುವತಿಯರು ಪ್ರಳಯ ಸಂಭವಿಸಿತೋ ಎಂಬಂತೆ. ಬೆಚ್ಚಿ ಅಸ್ತವ್ಯಸ್ತಗೊಂಡ ವಸ್ತಭೂಷಣಗಳೊಂದಿಗೆ ತಮ್ಮ ಪತಿಗಳನ್ನು ಅಪ್ಪಿಕೊಂಡರು, ಬೀಸಿದ ಮರಗಳು ನೆಲಕ್ಕುರುಳುತ್ತಿರಲು ಸಿದ್ಧಚಾರಣಮುನಿ ಸಂತತಿಗಳು ಕಳವಳದಿಂದ ಆಕಾಶವನ್ನ! ಡರಿದಂತೆ ಬೆಟ್ಟದ ತುದಿಗಳನ್ನೇರಿದರು. ಆದರೆ ಮಾರುತಿಯು ಭೋರ್ಗರೆಯುತ್ತಿದ್ದ ಸಮುದ್ರವನ್ನು ನೋಡಿ ಮನಸಿನಲ್ಲಿಯೇ ತ್ರಿವಿಕ್ರಮ ರೂಪವನ್ನು ನೆನೆಸಿಕೊಂಡು ಯೋಗಬಲದಿಂದ ದೇಹದಲ್ಲಿಯೂ ಅದರಂತೆಯೇ ಬೆಳೆದು ನಿಂತ. ತಾನು ನಿಂತಲ್ಲಿಂದಲೇ ಜಾಂಬವನೇ ಮುಂತಾದ ಪ್ರಮುಖ ಕಪಿನಾಯಕರನ್ನು ಕುರಿತು, ''ಈ ಸಾಗರವನ್ನು ಮರುತ, ಮಹಾವೇಗಿಯಾದ ಗರುಡ, ಮತ್ತು ನಾನು ಮಾತ್ರ ದಾಟಲು ಸಾಧ್ಯ; ಇತರರು ಆಕಾಶಪಥದಲ್ಲಿ ಸಾಗುವುದನ್ನು ಊಹಿಸಿಕೊಳ್ಳಲೂ ಆರರು ಎಂಬುದು ಸತ್ಯ.

ಆದರೆ ನಾನು ಸೀತಾಪತಿಯ ಚರಣಕಮಲಗಳ ಸ್ಮರಣೆಯಿಂದ ಗೋಪಾದದಗಲವೆಂಬಂತೆ ಹಾರಿ ದಾಟುತ್ತೇನೆ. ವರುಣಾಲಯವನ್ನು ದಾಟಿ ಲಂಕಾಪುರವನ್ನು ಹೊಕ್ಕು ಸೀತಾಮಾತೆಯನ್ನು ಹುಡುಕಿ ಆಕೆಯ ಪಾವನಪಾದಗಳ ದರ್ಶನಮಾಡುವವರೆಗೂ ಒಂದು ಕ್ಷಣವೂ ತಡಮಾಡಲಾರೆ, ನನ್ನ ಮಾತಿಗೆ ದೇವಗಣ ಯಷಿಗಳ ಸಾಕ್ಷಿ'' ಎಂದು ಶಪಥ ಮಾಡಿದ್ದನ್ನು ಕೇಳಿದ ಕಪಿವರರೆಲ್ಲರೂ ಆನಂದಭರಿತರಾಗಿ ಮರುತಾತ್ಮ ಹೊಗಳಿದರು.

ಹೀಗೆ ಪ್ರತಿಜ್ಞೆ ಮಾಡಿದ ಆಂಜನೇಯನು ತನ್ನೆರಡೂ ತೋಳುಗಳನ್ನು ಚಾಚಿ ತಲೆಯ ಮೇಲಿಟ್ಟುಕೊಂಡು ಒಂದು ಕಾಲನ್ನು ಹಿಂದಕ್ಕೂರಿ ಬಾಲವನ್ನೆತ್ತಿ ತಲೆಯನ್ನು ಬಾಗಿಸಿ ಪ್ರಾಣವನ್ನು ಹೃದ್ದೇಶದಲ್ಲಿ ಬಿಗಿಹಿಡಿದುಕೊಂಡು ಬೆಳಗುವ ವದನದಿಂದ ದೇಹವನ್ನು ತೂಗಿದಾಗ ಮಹೇಂದ್ರಗಿರಿಯು ತೂಗುಮಂಚದಂತಾಯಿತು. ಸೂರ್ಯಚಂದ್ರರು ಕುಂಡಲಗಳಂತಾಗಲು, ನಕ್ಷತ್ರಗಳು ಕೊರಳ ಹಾರದಂತೆಯೂ, ಗ್ರಹಗಳು ದೇಹದಲ್ಲಿನ ಆಭರಣಗಳಂತೆಯೂ ಹೊಳೆಯಲು, ಪಾದಗಳೂ ಬಾಲದ ತುದಿಯೂ ಮೇಲೆತ್ತಿರಲು ವೀರ ಮಾರುತಿಯು ಕೈಲಾಸದಲ್ಲಿನ ನಂದಿಯಂತೆ ಕಾಣಿಸಿದ.

ಪರ್ವತವೇ ನಡುಗಲು ಮರಗಳ ತುದಿಗಳಿಂದ ಉದುರುವ ಹೂಗಳಿಂದಾಗಿ ಆ ಪರ್ವತವು ಹೂಗಳಿಂದ ತುಂಬಿದ ಗಂಧಮಾದನದ ಪ್ರತಿಬಿಂಬದಂತೆ ಕಾಣಿಸಿತು; ಹಿಡಿದಿರುವ ಕೈಕಾಲುಗಳ ಘಟ್ಟಣೆಯಿಂದ ಬೆಟ್ಟದ ಜಡಭಾವ ಹೋಯಿತೆಂಬಂತೆ ಆನೆಯ ಮದಧಾರೆ ಸುರಿಯುವ ರೀತಿಯಲ್ಲಿ ಕಂದರಗಳಿಂದ ರಜಸ್ರಾವವಾಯಿತು!

ಮುಂದುವರಿಯುವುದು...



ಅಂತರಂಗದ ಮಾತು

ಡಾ.ಸುಧಾಕರ.ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು

**ಉತ್ತರ ಕರ್ನಾಟಕದ ಬಯಲುಸೀಮೆಯ ಹಳ್ಳಿಗಳಲ್ಲಿ ಮುಂಜಾನೆಯ ಮಂಜು ಮುಸುಕಿದ ಹೊತ್ತಿನಲ್ಲೇ ಗರಡಿ ಮನೆಗಳು ಜಾಗೃತಗೊಳ್ಳುತ್ತವೆ. ಅಲ್ಲಿನ ಅಂಗಳದಲ್ಲಿ ನೆಟ್ಟಿರುವ ನಯವಾದ ಮರದ ದಿಮ್ಮಿ ಕೇವಲ ಮೋಟಲ್ಲ; ಅದು ಕಿಶೋರ ಪೈಲ್ವಾನರ ಪಾಲಿನ ಕಲ್ಪವೃಕ್ಷ. ಕೆಮ್ಮಣ್ಣಿನ ಅಖಾಡದಲ್ಲಿ ಗುಡುಗುವ ಕಲಿಗಳು ತಮ್ಮ ಶರೀರವನ್ನು ವಜ್ರದಂತೆ ಹದಗೊಳಿಸಲು ಆಶ್ರಯಿಸುವುದು ಈ ಮಲ್ಲಕಂಬವನ್ನೇ.**

# ಮಲ್ಲಕಂಬದ ಕಸರತ್ತು ಕುಸ್ತಿಪಟುಗಳ ಅಜೇಯ ಬಲದ ಗುಟ್ಟು

ಒಂದು ಮಲ್ಲಕಂಬವು ಕುಸ್ತಿಪಟುವಿನಷ್ಟೇ ಬಲಿಷ್ಠವಾಗಿರಬೇಕು. ಇದಕ್ಕಾಗಿ ದಟ್ಟ ಅರಣ್ಯದ ತೇಗ ಅಥವಾ ಅರಗಿನ ಮರದ ದಿಮ್ಮಿಗಳನ್ನು ಆಯ್ಕೆ ಮಾಡಲಾಗುತ್ತದೆ. ಸುಮಾರು ಹತ್ತು ಅಡಿ ಎತ್ತರದ ಈ ಮರವನ್ನು ಕೆತ್ತಿ, ಯಾವುದೇ ಗಂಟುಗಳಿಲ್ಲದಂತೆ ನಯಗೊಳಿಸಲಾಗುತ್ತದೆ. ಇದಕ್ಕೆ ನಿರಂತರವಾಗಿ ಹರಳೆಣ್ಣೆಯನ್ನು ಪೂಸುವ ಮೂಲಕ ಗಾಜಿನಂತಹ ನುಣುಪು ನೀಡಲಾಗುತ್ತದೆ. ಈ ಜಾರುವ ಮೇಲ್ಮೈ ಮೇಲೆ ಹಿಡಿತ ಸಾಧಿಸುವುದು ಸಾಧಕನಿಗೆ ಏಕಾಗ್ರತೆಯ ಮೊದಲ ಪಾಠವನ್ನು ಕಲಿಸುತ್ತದೆ.

ಮಲ್ಲಕಂಬದ ಮೇಲಿನ ಪ್ರದರ್ಶನವು ಒಂದು ಜೀವಂತ ಕಲಾಕೃತಿ. ಇಲ್ಲಿ ಕೇವಲ ತೋಳ್ಬಲವಿದ್ದರೆ ಸಾಲದು, ಪ್ರಾಣಾಯಾಮದಂತಹ ಉಸಿರಾಟದ ನಿಯಂತ್ರಣ ಅತಿ ಮುಖ್ಯ. ಕಂಬವನ್ನು ಕಾಲಿನಿಂದ ಕತ್ತರಿಯಂತೆ ಬಿಗಿದು ಹಿಡಿದು, ದೇಹವನ್ನು ಗಾಳಿಯಲ್ಲಿ ತೇಲಿಸುವಾಗ ಪೈಲ್ವಾನನ ಇಡೀ ತೂಕವು ಒಂದು ಬಿಂದುವಿನಲ್ಲಿ ಕೇಂದ್ರೀಕೃತವಾಗುತ್ತದೆ. ಈ ಅಭ್ಯಾಸವು ವ್ಯಕ್ತಿಯಲ್ಲಿ ಅದ್ಭುತವಾದ ಸ್ಥಿರತೆಯನ್ನು ತರುತ್ತದೆ. ಇದರಿಂದ ಎದುರಾಳಿ ಎಷ್ಟೇ ಭೀಕರ ಪಟ್ಟುಗಳನ್ನು ಹಾಕಿದರೂ, ಕಲ್ಲಿನಂತೆ ಅಚಲವಾಗಿ ನಿಲ್ಲುವ ಛಾತಿ ಮೂಡುತ್ತದೆ.

ಜಿಮ್‌ಗಳಲ್ಲಿ ಬೆಳೆಯುವ ಉಬ್ಬಿದ ಸ್ನಾಯುಗಳಿಗಿಂತ, ಮಲ್ಲಕಂಬದಲ್ಲಿ ಪಳಗಿದ ದೇಹವು ಅತ್ಯಂತ ಕಠಿಣವಾಗಿರುತ್ತದೆ. ಕಂಬದ ಮೇಲಿನ ಸಾಹಸಗಳು ಶರೀರದ ಪ್ರತಿಯೊಂದು ನರನಾಡಿಯನ್ನೂ ಜಾಗೃತಗೊಳಿಸುತ್ತವೆ. ಹರಳೆಣ್ಣೆಯ ಮೃದುತ್ವ ಮತ್ತು ಮಣ್ಣಿನ ಒರಟುತನದ ನಡುವೆ ಮೈ ಉಜ್ಜಿಕೊಳ್ಳುವಾಗ ಚರ್ಮವು ವಿಶಿಷ್ಟ ತೇಜಸ್ಸನ್ನು ಪಡೆಯುತ್ತದೆ.

ಇದು ಪೈಲ್ವಾನನಿಗೆ ರಬ್ಬರ್‌ನಂತಹ ನಮ್ಯತೆ ಮತ್ತು ಕಬ್ಬಿಣದಂತಹ ಗಟ್ಟಿತನವನ್ನು ಏಕಕಾಲಕ್ಕೆ ನೀಡುತ್ತದೆ.

ಈ ಕಸರತ್ತು ಕಾಲಿನ ಹೆಬ್ಬೆರಳಿನಿಂದ ಹಸ್ತದ ವರೆಗಿನ ಪ್ರತಿಯೊಂದು ಸ್ನಾಯುವಿಗೂ ಕೆಲಸ ನೀಡುತ್ತದೆ. ಇದು ಪೈಲ್ವಾನನಿಗೆ ದಮ್ಮು ಅಥವಾ ಅಪಾರ ಸಹಿಷ್ಣುತೆಯನ್ನು ದಯಪಾಲಿಸುತ್ತದೆ. ಕಂಬದ ತುದಿಯಲ್ಲಿ ಸಮತೋಲನ ಕಾಯ್ದುಕೊಳ್ಳುವುದು ಒಳಾಂಗಣ ಅಂಗಗಳಿಗೆ ನೈಸರ್ಗಿಕ ಮರ್ಧನ ನೀಡಿದಂತಾಗುತ್ತದೆ. ಇದರಿಂದ ರಕ್ತ ಸಂಚಲನ ಚುರುಕಾಗಿ, ಜೀರ್ಣಶಕ್ತಿ ಮತ್ತು ರೋಗನಿರೋಧಕ ಶಕ್ತಿ ವೃದ್ಧಿಸುತ್ತದೆ. ಬೆನ್ನುಮೂಳೆಯನ್ನು ಬಲಿಷ್ಠಗೊಳಿಸುವ ಈ ವಿದ್ಯೆ, ವೃದ್ಧಾಪ್ಯದಲ್ಲೂ ವ್ಯಕ್ತಿ ಗಟ್ಟಿಯಾಗಿ ನಿಲ್ಲುವಂತೆ ಮಾಡುತ್ತದೆ.

ಇಂತಹ ಕಠಿಣ ಪರಿಶ್ರಮಕ್ಕೆ ಪೂರಕವಾಗಿ ಪೈಲ್ವಾನನ ಆಹಾರ ಪದ್ಧತಿಯೂ ಇರುತ್ತದೆ. ಜೋಳದ ರೊಟ್ಟಿ, ಗಟ್ಟಿ ಮೊಸರು, ತಾಜಾ ಬೆಣ್ಣೆ ಮತ್ತು ಮೊಳಕೆ ಬಂದ ಕಾಳುಗಳು ಪೈಲ್ವಾನನ ನೈಸರ್ಗಿಕ ಇಂಧನಗಳು. ಯಾವುದೇ ರಾಸಾಯನಿಕಯುಕ್ತ ಪುಡಿಗಳ ಹಂಗಿಲ್ಲದೆ, ಮಣ್ಣಿನ ಸತ್ವವನ್ನುಂಡು ಬೆಳೆಯುವ ಈ ಕಲಿಗಳು ನಮ್ಮ ನಾಡಿನ ಅಪ್ಪಟ ಕ್ರೀಡಾ ರಾಯಭಾರಿಗಳು.



ಇಂದಿನ ತಾಂತ್ರಿಕ ಯುಗದಲ್ಲಿ ಈ ಪುರಾತನ ಕಲೆ ಅಳಿವಿನ ಅಂಚಿನಲ್ಲಿದೆ.

ವಿದೇಶಿ ಕ್ರೀಡೆಗಳ ಮೋಹದಲ್ಲಿ ನಾವು ನಮ್ಮ ಸ್ವಂತಿಕೆಯನ್ನು ಮರೆಯುತ್ತಿದ್ದೇವೆ.

ಗರಡಿ ಮನೆಯ ಈ ಮಲ್ಲಕಂಬವು ನಮಗೆ ಕೇವಲ ದೈಹಿಕ ಸಾಮರ್ಥ್ಯವನ್ನಲ್ಲ, ಬದಲಾಗಿ ಬದುಕಿನ ಏರಿಳಿತಗಳಲ್ಲಿ ದೃಢವಾಗಿ ನಿಲ್ಲುವ ಜೀವನ ಪಾಠವನ್ನು ಕಲಿಸುತ್ತದೆ. ಈ ಸಾಹಸ ಪರಂಪರೆಯನ್ನು ಉಳಿಸಿ ಬೆಳೆಸುವುದು ಇಂದಿನ ತುರ್ತು ಅಗತ್ಯವಾಗಿದೆ.

# ಸಕಲೇಶಪುರದಲ್ಲಿ ಸಾಂಸ್ಕೃತಿಕ ಸಂಭ್ರಮ



ನಾ ಕಂಡಂತೆ

ವಿಶ್ವಾಸ್.ಡಿ.ಗೌಡ
ಲೇಖಕರು
ಸಾಮಾಜಿಕ ಚಿಂತಕರು

• **ಉದಯವಾಹಿನಿ, ಸಕಲೇಶಪುರ**

ಅಮಲು ಮುಕ್ತ ಸಕಲೇಶಪುರ ಆಂದೋಲನ ಹಾಗೂ ತಾಲ್ಲೂಕಿನ ಕಲೆ, ಸಾಹಿತ್ಯ, ಸಂಸ್ಕೃತಿ, ಕ್ರೀಡೆ ಮತ್ತು ಕನ್ನಡಪರ ಸಂಘಟನೆಗಳ ಸಹಕಾರದೊಂದಿಗೆ ಭರ್ಜರಿ ಸಾಂಸ್ಕೃತಿಕ ಕಾರ್ಯಕ್ರಮವು ಏಪ್ರಿಲ್ 19, 2026ರಂದು ಭಾನುವಾರ ಸಂಜೆ 6:30ಕ್ಕೆ ನಾಡಪ್ರಭು ಕೆಂಪೇಗೌಡ ಪ್ರತಿಮೆ ಆವರಣದಲ್ಲಿ ನಡೆಯಲಿದೆ.

ಈ ಕಾರ್ಯಕ್ರಮದಲ್ಲಿ ರಾಜ್ಯ ಅಂಬೇಡ್ಕರ್ ಪ್ರಶಸ್ತಿ ಪುರಸ್ಕೃತ ದಲಿತ ಮುಖಂಡ ಶ್ರೀ ಹೆತ್ತೂರು ಅಣ್ಣಯ್ಯ ಅವರಿಗೆ ಸನ್ಮಾನ ಸಮಾರಂಭ ನಡೆಯಲಿದ್ದು, ಜೊತೆಗೆ ಎರಡು ಕೃತಿಗಳ ಲೋಕಾರ್ಪಣೆ ಹಾಗೂ ಸಂಗೀತ ಸಂಜೆ ಕಾರ್ಯಕ್ರಮವೂ ಜರುಗಲಿದೆ. ಕಾರ್ಯಕ್ರಮದ ಪ್ರಮುಖ ಆಕರ್ಷಣೆಯಾಗಿ ಸಕಲೇಶಪುರ ಮೂಲದ ಖ್ಯಾತ ಬರಹಗಾರ, ಪತ್ರಕರ್ತ ಹಾಗೂ ಸಂಘಟಕರಾದ ವಿಶ್ವಾಸ್ ಡಿ. ಗೌಡ ಅವರ ಹತ್ತನೇ ಕೃತಿ ''ದೇವರನ್ನು ಹುಡುಕಬೇಕಾಗಿದೆ'' ಲೋಕಾರ್ಪಣೆಗೊಳ್ಳಲಿದೆ. ಇದೇ ಸಂದರ್ಭದಲ್ಲಿ ಕು. ಡಯಾನ ಡಿಸೋಜಾ ಅವರ ಚೊಚ್ಚಲ ಕೃತಿ ''ಅಂತರಂಗದ ಗುಟ್ಟು'' ಕೂಡ ಬಿಡುಗಡೆಗೊಳ್ಳಲಿದೆ.

ಕಾರ್ಯಕ್ರಮಕ್ಕೆ ಮಾಜಿ ಶಾಸಕರು ಹಾಗೂ ಅಮಲು ಮುಕ್ತ ಭಾರತ ಆಂದೋಲನದ ಪ್ರಮುಖರಾದ ಶ್ರೀ ಹೆಚ್.ಎಂ. ವಿಶ್ವನಾಥ್ ಅಧ್ಯಕ್ಷತೆ ವಹಿಸಲಿದ್ದಾರೆ. ಉದ್ಘಾಟನೆಯನ್ನು ಕೆ.ಎ.ಎಸ್. ಉಪ ವಿಭಾಗಾಧಿಕಾರಿಗಳಾದ ಶ್ರೀ ಹುಲ್ಲುಮನಿ ತಿಮ್ಮಣ್ಣ ನೆರವೇರಿಸಲಿದ್ದಾರೆ.

ಪುಸ್ತಕಗಳ ಕುರಿತು ಹಿರಿಯ ರಂಗಕರ್ಮಿಗಳಾದ ಶ್ರೀ ಪ್ರಸಾದ್ ರಕ್ಷಿದಿ ಮಾತನಾಡಲಿದ್ದಾರೆ. ಜಿಲ್ಲೆಯ ಸಾಹಿತ್ಯಾಸಕ್ತರು ಹಾಗೂ ಗಣ್ಯರ ಸಮ್ಮುಖದಲ್ಲಿ ನಡೆಯಲಿರುವ ಈ ಕಾರ್ಯಕ್ರಮವು ಸಾಹಿತ್ಯ ವಲಯದಲ್ಲಿ ವಿಶೇಷ ಗಮನ ಸೆಳೆದಿದೆ. ಸಕಲೇಶಪುರ ಮೂಲದ ವಿಶ್ವಾಸ್ ಡಿ. ಗೌಡ ಅವರು ಕನ್ನಡ ಸಾಹಿತ್ಯ ಲೋಕದಲ್ಲಿ ವಿಶಿಷ್ಟ ಗುರುತನ್ನು ಪಡೆದಿದ್ದಾರೆ. ''ಕತ್ತರಿಘಟ್ಟ ಮತ್ತು ಹರಿಸೇವಾ'', ''ನೆನಪುಗಳ ಖಾತೆ'', ''ಬಾಳೊಂದು ಚೈತ್ರಾಮಯ'', ''ಚಿಂತನ ಚೈತ್ರ'', ''ಭಾವನೆಗಳ ಪ್ರತಿರೂಪ'', ''ವಿಶ್ವಾಸದ ವಿಮರ್ಶೆ'', ''ನೆಮ್ಮದಿಯ ವಿಳಾಸವೆಲ್ಲಿದೆ'', ''ಕಾಲದ ಹೆಜ್ಜೆ ಗುರುತು'' ಸೇರಿದಂತೆ ಅನೇಕ ಕೃತಿಗಳನ್ನು ಪ್ರಕಟಿಸಿದ್ದಾರೆ.

**ಸಾಹಿತ್ಯಾಸಕ್ತರು, ಗಣ್ಯರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಂತೆ ಆಯೋಜಕರು ಮನವಿ ಮಾಡಿದ್ದಾರೆ.**




ಅವರ ''ದೇವರನ್ನು ಹುಡುಕಬೇಕಾಗಿದೆ'' ಕೃತಿ ಮನುಷ್ಯನ ಅಂತರಂಗದ ಅನ್ವೇಷಣೆ, ಆತ್ಮಶೋಧನೆ ಹಾಗೂ ಸಮಾಜದ ವಾಸ್ತವತೆಗಳನ್ನು ಒಳಗೊಂಡ ಚಿಂತನಾತ್ಮಕ ಕಾದಂಬರಿಯಾಗಿದೆ. ದೇವರನ್ನು ದೇವಸ್ಥಾನಗಳಲ್ಲಷ್ಟೇ ಅಲ್ಲ, ಮನುಷ್ಯನ ಒಳಗುಹೆಯಲ್ಲಿಯೂ ಹುಡುಕಬೇಕೆಂಬ ಗಾಢ ಸಂದೇಶವನ್ನು ಈ ಕೃತಿ ನೀಡುತ್ತದೆ.

ಜಯರಾಮನ ಪಾತ್ರದ ಮೂಲಕ ಭಕ್ತಿ ಮತ್ತು ವ್ಯವಸ್ಥೆಯ ನಡುವಿನ ಸಂಘರ್ಷವನ್ನು ಚಿತ್ರಿಸಿರುವ ಈ ಕೃತಿ, ಧಾರ್ಮಿಕ ಅಸಮಾನತೆಗಳ ವಿರುದ್ಧ ಧೈರ್ಯವಾಗಿ ಪ್ರಶ್ನೆ ಎತ್ತುತ್ತದೆ. ಗ್ರಾಮೀಣ ಬದುಕಿನ ನೈಜ ಚಿತ್ರಣ, ಪಾತ್ರಗಳ ಭಾವನಾತ್ಮಕ ಆಳತೆ ಮತ್ತು ಆಶಾದಾಯಕ ಅಂತ್ಯವು ಕೃತಿಗೆ ವಿಶೇಷ ಮೌಲ್ಯವನ್ನು ನೀಡಿವೆ. ಬರಹಗಾರರಾಗಿ ಮಾತ್ರವಲ್ಲದೆ ಪತ್ರಿಕಾ ಕ್ಷೇತ್ರದಲ್ಲಿಯೂ ಅವರು ಚುರುಕಾಗಿ ತೊಡಗಿಸಿಕೊಂಡಿದ್ದು, ''ಜೀವನಾಡಿ'' ಮಾಸಪತ್ರಿಕೆಯ ಉಪಸಂಪಾದಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಜೊತೆಗೆ ವಿವಿಧ ಸಾಹಿತ್ಯ ಹಾಗೂ ಸಾಂಸ್ಕೃತಿಕ ಸಂಘಟನೆಗಳ ಮೂಲಕ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

## ಅರಿತು ಬಾಳಬೇಕಿದೆ

ಬರವಣಿಗೆಯ ಖಡ್ಗದಲಿ
ಸಾಮಾಜಿಕ ಕಳಕಳಿಯಿರಲಿ
ಬದುಕೆಂಬ ಹೋರಾಟದಲಿ
ಒಳ್ಳೆಯ ಬದುಕಿನ ಭಾವವಿರಲಿ...

ನೋವು ನಲಿವುಗಳ ಮಧ್ಯೆಯೇ
ಸಾಗುತಿದೆ ದಿನನಿತ್ಯದ ರಗಳೆಯೇ
ಅರಿತು ಬಾಳಬೇಕಿದೆ ಜೀವನದಿ
ಕಲಿತು ನಡೆಯಬೇಕಿದೆ ಬಾಳಿನಲಿ.....

ಒಮ್ಮೆ ಗೆಲುವು ಒಮ್ಮೆ ಸೋಲು
ಪಕ್ವತೆಯ ಬಾಳಿಗದು ಅಡಿಗಲ್ಲು
ಬೇಗ ಬೆಳೆಯಬೇಕೆಂದು ಏನಿಲ್ಲ
ನಿಧಾನವಾದರೂ ಪ್ರಧಾನವಾಗಿ ಇರಬೇಕಲ್ಲ...

ಕಲಿತು ಕಲಿಸಬೇಕಿದೆ ಹಲವು ವಿಚಾರ
ತಿಳಿಯುತ ತಿಳಿಸಬೇಕಿದೆ ಸುವಿಚಾರ
ಹಿರಿಯರಿಂದ ಕಿರಿಯರು ಎಂದು ತಿಳಿಯುತ
ಗೌರವ ನೀಡುತ ಆಶೀರ್ವಾದವ ಪಡೆಯುತ...

ಹೆಣ್ಣೆಂಬ ತಾಯಿ ದೇವರ ನಮಿಸುತ
ಕಲಿಯುಗದೀ ಆಕೆಯ ರಕ್ಷಿಸುತ
ಸೋದರರಾಗಿ ಬಾಳೋಣ ಸಂರಕ್ಷಿಸುತ
ಎಲ್ಲೆಡೆಯೂ ಆಕೆಯನು ಪೂಜಿಸುತ...

ದಂಡಿಗಿಲ್ಲ ದಾಳಿಗಿಲ್ಲ ಏಕೆ ಬೆದರಿಕೆ
ಎಲ್ಲೆಡೆಯು ನೀತಿ ಪಾಠದ ಆಳ್ವಿಕೆ
ನಡೆಸಬೇಕು ಒಂದಾಗಿ ಜೊತೆಯಾಗಿಯೇ
ಬನ್ನಿರೆಲ್ಲ ಬಾಳೋಣ ಪ್ರೀತಿಯ ತೆರಿನಲ್ಲಿಯೇ...

-ಹೆಚ್. ಎಸ್. ಪ್ರತಿಮಾ ಹಾಸನ್
ಸಾಹಿತಿ. ಶಿಕ್ಷಕಿ. ಸಾಮಾಜಿಕ ಚಿಂತಕಿ. ಹಾಸನ.



# ಎಣ್ಣೆಯುಕ್ತ ಮುಖಕ್ಕೆ ನೈಸರ್ಗಿಕ ಪರಿಹಾರ

ಅತಿಯಾದ ಎಣ್ಣೆ ಮತ್ತು ಜಿಗುಟುತನ ಹೆಚ್ಚಾಗಿ ಬಿಟ್ಟರೆ ಚರ್ಮದ ರಂಧ್ರಗಳನ್ನು ಮುಚ್ಚಿ ಹೋಗಿಬಿಡುತ್ತವೆ, ಕೊನೆಗೆ ಇಲ್ಲಿಯೇ ಬ್ಯಾಕ್ಟೀರಿಯಾಗಳು ಬೆಳೆಯಲು ಕಾರಣ ವಾಗುತ್ತದೆ, ಕೊನೆಗೆ ಇದೇ ಕಾರಣಕ್ಕೆ ಮುಖ, ಬೆನ್ನು ಮತ್ತು ಎದೆಯ ಮೇಲೆ ಮೊಡವೆ ದದ್ದು ಮತ್ತು ಕಪ್ಪು ಚುಕ್ಕೆಗಳಿಗೆ ಕಾರಣವಾಗುತ್ತದೆ.



ಹಾಗಾದ್ರೆ ಬೇಸಿಗೆಯಲ್ಲಿ ಎಣ್ಣೆಯುಕ್ತ ಚರ್ಮದ ಆರೈಕೆಯಲ್ಲಿ ಏನೆಲ್ಲಾ ಮುನ್ನೆಚ್ಚರಿಕೆ ತೆಗೆದುಕೊಳ್ಳಬಹುದು.

ಅಧ್ಯಯನದ ಪ್ರಕಾರ ಬೇಸನ್ (ಕಡಲೆ ಹಿಟ್ಟು) ಚರ್ಮರೋಗ ಅಧ್ಯಯನಗಳಲ್ಲಿ ಎಣ್ಣೆಯುಕ್ತ ಚರ್ಮವನ್ನು ನಿರ್ವಹಿಸಲು ಪ್ರಯೋಜನಕಾರಿ, ನೈಸರ್ಗಿಕ ಘಟಕಾಂಶವೆಂದು ಗುರುತಿಸಲ್ಪಟ್ಟಿದೆ, ಇದು ಪ್ರಾಥಮಿಕವಾಗಿ ಆಳವಾದ ಶುದ್ಧೀಕರಣ ಮತ್ತು ಸೌಮ್ಯವಾದ ಸಿಪ್ಪೆಸುಲಿಯುವ ಏಜೆಂಟ್ ಆಗಿ ಕಾರ್ಯನಿರ್ವಹಿಸುತ್ತದೆ. ಚರ್ಮವನ್ನು ತೀವ್ರವಾಗಿ ತೆಗೆದುಹಾಕದೆ ಹೆಚ್ಚುವರಿ ಮೇದೋಗ್ರಂಥಿಗಳ ಸ್ರಾವ ಮತ್ತು ಕಲ್ಮಶಗಳನ್ನು ತೆಗೆದುಹಾಕುವ ಅದರ ಸಾಮರ್ಥ್ಯವನ್ನು ಅಧ್ಯಯನಗಳು ಹೆಚ್ಚಾಗಿ ಎತ್ತಿ ತೋರಿಸುತ್ತವೆ.

### ಇದನ್ನು ನಿರ್ವಹಿಸಲು ಕೆಲವು ಸಲಹೆಗಳು

ಚರ್ಮದ ಎಣ್ಣೆ ಉತ್ಪಾದನೆಯನ್ನು ನಿಯಂತ್ರಿಸಲು ಮತ್ತು ತೇವಾಂಶವನ್ನು ಹೆಚ್ಚಿಸಲು ಪ್ರಯೋಜನಕಾರಿ ಎಂದು ಪರಿಗಣಿಸಲಾಗಿದೆ.

ಸುಮಾರು ಒಂದು ಕಪ್ ಸೋಯಾಬೀನ್ ತೆಗೆದುಕೊಂಡು ಅವುಗಳನ್ನು ನುಣ್ಣಗೆ ಪುಡಿ ಮಾಡಿ. ಪುಡಿ ಮಾಡಿದ ನಂತರ, ಅದನ್ನು ನೀರಿನೊಂದಿಗೆ ಬೆರೆಸಿ ನಯವಾದ ಪೇಸ್ಟ್ ಮಾಡಿ. ಈ ಪೇಸ್ಟ್ ಅನ್ನು ನಿಮ್ಮ ಮುಖಕ್ಕೆ ಹಚ್ಚಿ ತಣ್ಣೀರಿನಿಂದ ತೊಳೆಯಿರಿ. ಎಣ್ಣೆಯುಕ್ತ ಚರ್ಮವನ್ನು ತೊಡೆದುಹಾಕಲು ಈ ಪೇಸ್ಟ್ ಅನ್ನು ನಿಯಮಿತ ವಾಗಿ ಬಳಸಿ.



### ಹೀಗೂ ಮಾಡಬಹುದು

ಸ್ವಲ್ಪ ಸೋಯಾಬೀನ್ ಅನ್ನು ರಾತ್ರಿ ನೆನೆಸಿಡಿ, ಮರುದಿನ ಬೆಳಗ್ಗೆ ಅದನ್ನು ನುಣ್ಣಗೆ ರುಬ್ಬಿ ದಪ್ಪಗೆ ಪೇಸ್ಟ್ ತಯಾರಿಸಿ.ಇನ್ನು ಈ ಪೇಸ್ಟ್ ಗೆ ಸ್ವಲ್ಪ ನೀರು ಅಥವಾ ಜೇನುತುಪ್ಪವನ್ನು ಸೇರಿಸಿ ಮುಖಕ್ಕೆ ದಪ್ಪಗೆ ಹಚ್ಚಿಕೊಳ್ಳಿ. ಆ ಬಳಿಕ 15 ನಿಮಿಷಗಳ ನಂತರ ಉಗುರುಬೆಚ್ಚಗಿನ ನೀರಿನಿಂದ ಮುಖ ತೊಳೆಯಿರಿ.

**ಮುಲ್ತಾನಿ ಮಿಟ್ಟಿ ಪೇಸ್ಟ್ :** ಮುಲ್ತಾನಿ ಮಿಟ್ಟಿ ಅನ್ನು ಬಹಳ ಹಿಂದಿನಿಂದಲೂ ವಿವಿಧ ರೀತಿಯ ಚರ್ಮದ ಸಮಸ್ಯೆಗಳಿಗೆ ಚಿಕಿತ್ಸೆ ನೀಡಲು ಬಳಸಲಾಗುತ್ತದೆ. ಮುಲ್ತಾನಿ ಮಿಟ್ಟಿ ಪೇಸ್ಟ್ ಎಣ್ಣೆಯುಕ್ತ ಚರ್ಮಕ್ಕೆ ಅತ್ಯುತ್ತಮ ಚಿಕಿತ್ಸೆಯಾಗಿದೆ. ಮುಲ್ತಾನಿ ಮಿಟ್ಟಿ ಒಂದು ಗಿಡಮೂಲಿಕೆ ಪುಡಿಯಾಗಿದ್ದು ಇದನ್ನು ಪ್ರತಿದಿನ ಬಳಸಬಹುದು. ಉತ್ತಮ ಫಲಿತಾಂಶಗಳಿಗಾಗಿ, ನೀವು ಮುಲ್ತಾನಿ ಮಿಟ್ಟಿಯನ್ನು ಶ್ರೀಗಂಧದ ಪುಡಿ, ಅರಿಶಿನ ಮತ್ತು ಕಡಲೆ ಹಿಟ್ಟಿನೊಂದಿಗೆ ಬೆರೆಸಬಹುದು.

### ಮುಲ್ತಾನಿ ಮಿಟ್ಟಿ ಪುಡಿ, ಶ್ರೀಗಂಧದ ಪುಡಿ ಮತ್ತು ರೋಸ್ ವಾಟರ್

ಒಂದು ಬೌಲ್‌ನಲ್ಲಿ ಒಂದು ಚಮಚ ಮುಲ್ತಾನಿ ಮಿಟ್ಟಿ ಪುಡಿ ಮತ್ತು ಒಂದು ಚಮಚ ಶ್ರೀಗಂಧದ ಪುಡಿಯನ್ನು ಹಾಕಿಕೊಳ್ಳಿ. ಇನ್ನು ಇದಕ್ಕೆ ಸ್ವಲ್ಪ ರೋಸ್ ವಾಟರ್ ಅಥವಾ ಹಸಿ ಹಾಲು ಸೇರಿಸಿ ದಪ್ಪನೆಯ ಪೇಸ್ಟ್ ರೀತಿ ಮಾಡಿಕೊಳ್ಳಿ. ಒಂದು ವೇಳೆ ನಿಮ್ಮ ಬಳಿ ರೋಸ್ ವಾಟರ್ ಇಲ್ಲದಿದ್ದರೆ, ತಣ್ಣೀರನ್ನು ಸಹ ಬಳಸಬಹುದು. ಇಷ್ಟೆಲ್ಲಾ ಆದ ಬಳಿಕ ಈ ಮಿಶ್ರಣವನ್ನು ಮುಖಕ್ಕೆ ಹಚ್ಚಿ ಸ್ವಲ್ಪ ಸಮಯದವರೆಗೆ ಒಣಗಲು ಬಿಡಿ, ಆಮೇಲೆ ತಣ್ಣೀರಿನಿಂದ ಮುಖವನ್ನು ತೊಳೆಯಿರಿ.



# ಬೇವಿನ ರಸ ಕುಡಿಯೋದು ಸೂಕ್ತ...

**ಬೇವಿನ ರಸವನ್ನು ಸೇವಿಸುವ ಸರಿಯಾದ ಮಾರ್ಗವೆಂದರೆ ಸಣ್ಣ ಪ್ರಮಾಣದಲ್ಲಿ - ಸಾಮಾನ್ಯವಾಗಿ 10-15 ಮಿಲಿ ನೀರಿನಲ್ಲಿ ದುರ್ಬಲಗೊಳಿಸಲಾಗುತ್ತದೆ - ಆದ್ಯತೆಯಾಗಿ ಖಾಲಿ ಹೊಟ್ಟೆಯಲ್ಲಿ, ಮತ್ತು ವೈದ್ಯಕೀಯ ಮೇಲ್ವಿಚಾರಣೆಯಿಲ್ಲದೆ ದೀರ್ಘಕಾಲದವರೆಗೆ ಅಲ್ಲ. ಯಾವುದೇ ನೈಸರ್ಗಿಕ ಪರಿಹಾರದಂತೆ, ಬೇವನ್ನು ವೈಯಕ್ತಿಕ ಆರೋಗ್ಯ ಸ್ಥಿತಿಗಳ ಅರಿವಿನೊಂದಿಗೆ ಮತ್ತು ವೈದ್ಯರೊಂದಿಗೆ ಸಮಾಲೋಚಿಸಿ ಎಚ್ಚರಿಕೆಯಿಂದ ಬಳಸಬೇಕು.**

ಬೇವಿನ ರಸವನ್ನು ಕುಡಿಯುವ ಮೂಲಕ, ನಾವು ನಮ್ಮ ದೇಹವನ್ನು ನಿರ್ವಿಷಗೊಳಿಸುತ್ತಿದ್ದೇವೆ ಎಂದು ನಾವು ಹೆಚ್ಚಾಗಿ ನಂಬುತ್ತೇವೆ, ವಾಸ್ತವದಲ್ಲಿ ನಮ್ಮ ಅಂಗಾಂಶ ದ್ರವ್ಯರಾಶಿಯ ಕ್ಷೀಣತೆಗೆ ಕಾರಣವಾಗುತ್ತಿದ್ದೇವೆ.

ಅತಿಯಾದ ಪ್ರಮಾಣದ ಕಹಿ ಸಾರವು ದೇಹವನ್ನು ಪ್ರವೇಶಿಸಿದಾಗ, ಅದು ವಾತ ದೋಷದ ಮೇಲೂ ಪ್ರತಿಕೂಲ ಪರಿಣಾಮ ಬೀರುತ್ತದೆ. ಇದರ ಪರಿಣಾಮವಾಗಿ, ಕೀಲುಗಳಲ್ಲಿನ ನಯಗೊಳಿಸುವ ದ್ರವವು ಕ್ಷೀಣಿಸಲು ಪ್ರಾರಂಭಿಸುತ್ತದೆ.

ಇದು ಕೀಲುಗಳಲ್ಲಿ ಬಿಗಿತ ಮತ್ತು ನೋವಿಗೆ ಕಾರಣವಾಗಬಹುದು. ಪರಿಣಾಮವಾಗಿ, ಚರ್ಮವು ಅತಿಯಾಗಿ ಒಣಗುತ್ತದೆ ಮತ್ತು ಅಕಾಲಿಕ ವಯಸ್ಸಾದ ಚಿಹ್ನೆಗಳು ಕಾಣಿಸಿಕೊಳ್ಳಲು ಪ್ರಾರಂಭಿಸಬಹುದು.

**ದೇಹದೊಳಗೆ ಶುಷ್ಕತೆಗೆ ಕಾರಣವಾಗುತ್ತದೆ**

ಇದರ ಅಂತರ್ಗತ ಸ್ವಭಾವ ತಂಪಾಗಿರುತ್ತದೆ ಮತ್ತು ಒಣಗಿರುತ್ತದೆ. ಪರಿಣಾಮವಾಗಿ, ಇದನ್ನು ದೀರ್ಘಕಾಲದವರೆಗೆ ಸೇವಿಸುವುದರಿಂದ ದೇಹದೊಳಗೆ ಅತಿಯಾದ ಶುಷ್ಕತೆಗೆ ಕಾರಣ ಅಗಬಹುದು.

ನೀವು ಹೆಚ್ಚಿನ ಪ್ರಮಾಣದ ಕಹಿ ಪದಾರ್ಥಗಳನ್ನು ಸೇವಿಸಿದಾಗ, ರಕ್ತ, ಸ್ನಾಯು ಮತ್ತು ಕೊಬ್ಬು ಸೇರಿದಂತೆ ದೇಹದ ಏಳು ಪ್ರಾಥಮಿಕ ಅಂಗಾಂಶಗಳು ವಿವಿಧ ಹಂತಗಳಿಗೆ ದುರ್ಬಲಗೊಳ್ಳಲು ಪ್ರಾರಂಭಿಸುತ್ತವೆ. ಪರಿಣಾಮವಾಗಿ, ಆರೋಗ್ಯಕರ ಆಹಾರವನ್ನು ಕಾಪಾಡಿಕೊಳ್ಳುತ್ತಿದ್ದರೂ ಸಹ ನೀವು ದೌರ್ಬಲ್ಯ ಮತ್ತು ಆಯಾಸವನ್ನು ಅನುಭವಿಸಬಹುದು.



### ಯಾರಿಗೆಲ್ಲ ಸೂಕ್ತವಲ್ಲ

ಆದರೆ ಇದು ಎಲ್ಲರಿಗೂ ಸೂಕ್ತವಲ್ಲ. ಗರ್ಭಿಣಿ ಅಥವಾ ಹಾಲುಣಿಸುವ ಮಹಿಳೆಯರು, ಕಡಿಮೆ ರಕ್ತದ ಸಕ್ಕರೆ ಮಟ್ಟವನ್ನು ಹೊಂದಿರುವ ವ್ಯಕ್ತಿಗಳು ಅಥವಾ ಕೆಲವು ಔಷಧಿಗಳನ್ನು ತೆಗೆದುಕೊಳ್ಳುತ್ತಿರುವವರು ವೈದ್ಯರ ಸಲಹೆಯ ಹೊರತು ನಿಯಮಿತ ಸೇವನೆಯನ್ನು ತಪ್ಪಿಸಬೇಕು. ಹೆಚ್ಚುವರಿ ಸೇವನೆಯು ಯಕೃತ್ತಿನ ಒತ್ತಡ ಅಥವಾ ಜಠರಗರುಳಿನ ಅಸ್ವಸ್ಥತೆಗೆ ಕಾರಣವಾಗಬಹುದು ಎನ್ನುತ್ತಾರೆ ಯಲಹಂಕದ ಸ್ಪರ್ಶ ಆಸ್ಪತ್ರೆಯ ಡಯೆಟೀಶಿಯನ್ ಡಾ. ಗೌಸಿಯಾ ಅಜೀಜ್.

### ಬೇವಿನ ಎಲೆ

ಅಂತಹ ಆರೋಗ್ಯಕರ ಎಲೆಗಳ ಬಗ್ಗೆ ಚರ್ಚಿಸುವಾಗ, ಬೇವಿನ ಎಲೆ ಪ್ರಮುಖವಾಗಿದೆ. ಏಕೆಂದರೆ ಇದು ನಿಜವಾಗಿಯೂ ಪ್ರಯೋಜನಕಾರಿ ಗುಣಗಳ ನಿಧಿಯಾಗಿದೆ. ಬೇವಿನ ರಸವನ್ನು ಸಾಂಪ್ರದಾಯಿಕ ಔಷಧದಲ್ಲಿ ಅದರ ಆಂಟಿಮೈಕ್ರೊಬಿಯಲ್, ಉರಿಯೂತ ನಿವಾರಕದ ರೀತಿ ಮತ್ತು ನಿರ್ವಿಶೀಕರಣ ಗುಣಲಕ್ಷಣಗಳಿಗಾಗಿ ಬಹಳ ಹಿಂದಿನಿಂದಲೂ ಮೌಲ್ಯಯುತವಾಗಿದೆ.

ಮಿತವಾಗಿ ಸೇವಿಸಿದರೆ, ಇದು ಚರ್ಮದ ಆರೋಗ್ಯವನ್ನು ಬೆಂಬಲಿಸಲು, ಜೀರ್ಣಕ್ರಿಯೆಯನ್ನು ಸುಧಾರಿಸಲು ಮತ್ತು ಅದರ ಕಹಿ ಸಂಯುಕ್ತಗಳಿಂದಾಗಿ ರಕ್ತದಲ್ಲಿನ ಸಕ್ಕರೆ ನಿಯಂತ್ರಣಕ್ಕೆ ಸಹಾಯ ಮಾಡುತ್ತದೆ .

# ಇಂಡೋನೇಷ್ಯಾದಲ್ಲಿ ಹೆಲಿಕಾಪ್ಟರ್ ಪತನ, 8 ಮಂದಿ ಸಾವು

**ಜಕಾರ್ತ:** ಇಂಡೋನೇಷ್ಯಾದ ಪಶ್ಚಿಮ ಕಾಲಿಮಂಟನ್ ಪ್ರಾಂತ್ಯದಲ್ಲಿ ಹೆಲಿಕಾಪ್ಟರ್ ಒಂದು ಪತನಗೊಂಡಿದ್ದು, ಅದರಲ್ಲಿದ್ದ 8 ಜನ ಮೃತಪಟ್ಟಿರುವ ಘಟನೆ ನಡೆದಿದೆ.

**ಕಾರಣ ಮಾತ್ರ ನಿಗೂಢ**

**ಹೆಲಿಕಾಪ್ಟರ್ ಪತನ:** ಇಂಡೋನೇಷ್ಯಾದ ಮೆಲಾವಿಯ ತೋಟ ಪ್ರದೇಶದಿಂದ ಹಾರಾಟ ನಡೆಸಿದ ಏರ್‌ಬಸ್ ಎಚ್130 ಹೆಲಿಕಾಪ್ಟರ್ ಕೇವಲ 5 ನಿಮಿಷಗಳ ಬಳಿಕ ತನ್ನ ಸಂಪರ್ಕ ಕಳೆದುಕೊಂಡಿದ್ದು, ಗುಡ್ಡಗಾಡು ಪ್ರದೇಶದಲ್ಲಿ ನಾಪತ್ತೆಯಾಗಿದ್ದು, ಪತನಗೊಂಡ ಅಪಘಾತ ಸಂಭವಿಸಿದೆ ಎಂದು ಅಲ್ಲಿನ ಸ್ಥಳೀಯ ಅಧಿಕಾರಿಗಳು ತಿಳಿಸಿದ್ದಾರೆ. ಈ ಕುರಿತು ಮಾಹಿತಿ ನೀಡಿದ ಇಂಡೋನೇಷ್ಯಾದ ರಕ್ಷಣಾ ಸಂಸ್ಥೆಯ ಮುಖ್ಯಸ್ಥ ಮೊಹಮ್ಮದ್ ಸಯಾಫಿ ಅವರ ಹೇಳಿಕೆಯ ಪ್ರಕಾರ, ಮೆಲಾವಿಯ



ತೋಟದಿಂದ ಹೊರಟ್ಟಿದ್ದ ವಿಮಾನ ಕಾಲಿಮಂಟನ್ ಪ್ರಾಂತ್ಯದಲ್ಲಿ ತನ್ನ ಸಂಪರ್ಕವನ್ನು ಕಳೆದುಕೊಂಡಿದ್ದು, ಅಪಘಾತ ನಡೆದ ಸ್ಥಳವು ಕಡಿದಾದ ಗುಡ್ಡಗಾಡು ಪ್ರದೇಶ ಹೊಂದಿರುವ ದಟ್ಟವಾದ ಅರಣ್ಯ ಪ್ರದೇಶದಲ್ಲಿದೆ ಎಂದು ತಿಳಿಸಿದ್ದಾರೆ.

**ಅಪಘಾತ ನಡೆದ 3ಕಿ.ಮೀ ದೂರದಲ್ಲಿ ಸಿಕ್ಕ ಅವಶೇಷ:** ಅಲ್ಲದೆ, ಅಪಘಾತದ ಕುರಿತು ಮಾಹಿತಿ ಸಿಕ್ಕ ಕೂಡಲೇ ಶೋಧ ಕಾರ್ಯಗಳು ನಡೆದಿರುವುದಾಗಿ ತಿಳಿಸಿರುವ ಇಂಡೋನೇಷ್ಯಾದ ರಕ್ಷಣಾ ಸಂಸ್ಥೆಯ ಮುಖ್ಯಸ್ಥ ಘಟನೆ ಬಳಿಕ ತಕ್ಷಣವೇ ರಕ್ಷಣಾ ತಂಡಗಳು ಸ್ಥಳಕ್ಕೆ ಧಾವಿಸಿದ್ದು, ಹೆಲಿಕಾಪ್ಟರ್ ಸಂಪರ್ಕ ಕಳೆದುಕೊಂಡ ಸುಮಾರು 3 ಕಿಮೀ (2 ಮೈಲುಗಳು) ಪಶ್ಚಿಮಕ್ಕೆ ಹೆಲಿಕಾಪ್ಟರ್‌ನ ಬಾಲದ ಭಾಗವಾಗಿರಬಹುದು ಎಂದು ಶಂಕಿಸಲಾದ ಅವಶೇಷಗಳನ್ನು ಪತ್ತೆಹಚ್ಚಿದ್ದಾರೆ ಎಂದು ತಿಳಿಸಿದ್ದಾರೆ.

**ಅಪಘಾತದ ಕಾರಣ ನಿಗೂಢ:** ಮುಂದುವರೆದು, ಈ ಹೆಲಿಕಾಪ್ಟರ್ ಪತನ ಅಪಘಾತದಲ್ಲಿ ಹೆಲಿಕಾಪ್ಟರ್‌ನಲ್ಲಿದ್ದ 6 ಮಂದಿ ಪ್ರಯಾಣಿಕರು ಸೇರಿದಂತೆ 2 ಜನ ಸಿಬ್ಬಂದಿಗಳು ಸಾವನ್ನಪ್ಪಿರುವುದಾಗಿ ಖಚಿತಪಡಿಸಿದ್ದಾರೆ. ಆದಾಗ್ಯೂ, ಅಪಘಾತದ ಕಾರಣ ಈವರೆಗೂ ನಿಗೂಢವಾಗಿದ್ದು, ಯಾವ ಕಾರಣಕ್ಕಾಗಿ ಅಪಘಾತ ನಡೆದಿದೆ ಎಂಬುದಾಗಿ ನಿರ್ದಿಷ್ಟ ಪ್ರಾಥಮಿಕ ಮಾಹಿತಿ ಲಭ್ಯವಾಗಿಲ್ಲ ಎಂದು ತಿಳಿಸಿದ್ದಾರೆ.

ಇನ್ನು, ಶುಕ್ರವಾರ ಸೇನಾ ಮತ್ತು ಪೊಲೀಸ್ ಸಿಬ್ಬಂದಿ ಸೇರಿದಂತೆ ರಕ್ಷಣಾ ತಂಡಗಳು ಅಪಘಾತದ ಸ್ಥಳವನ್ನು ತಲುಪಲು ಭೂ ಮಾರ್ಗಗಳ ಮೂಲಕ ಪ್ರಯತ್ನ ನಡೆಸಿವೆ ಎಂದು ತಿಳಿಸಿರುವ ರಕ್ಷಣಾ ಮುಖ್ಯಸ್ಥ ಮೊಹಮ್ಮದ್ ಸಯಾಫಿ ಈ ಮಲಾವಿ ತೋಟದ ಪ್ರದೇಶವು ಇಂಡೋನೇಷ್ಯಾದ ತಾಳೆ ಎಣ್ಣೆ ಕಂಪನಿ ಸಿಟ್ರಾ ಮಹ್ಕೋಟಾ ಒಡೆತನದಲ್ಲಿದ್ದು, ಹೆಲಿಕಾಪ್ಟರ್ ಮ್ಯಾಥ್ಯೂ ಏರ್ ನುಸಂತಾರಕ್ಕೆ ಸೇರಿತ್ತು ಎಂದು ತಿಳಿಸಿದ್ದಾರೆ.

## ಮಿನಿ ನ್ಯೂಸ್

### ಸಮೃದ್ಧಿಕರಿಸಿದ ಯುರೇನಿಯಂ ಹಸ್ತಾಂತರಿಸಲು ಇರಾನ್ ಒಪ್ಪಿದೆ: ಟ್ರಂಪ್

**ವಾಷಿಂಗ್ಟನ್:** ತಮ್ಮಲ್ಲಿರುವ ಸಮೃದ್ಧೀಕರಿಸಿದ ಯುರೇನಿಯಂ ಅನ್ನು ಹಸ್ತಾಂತರಿಸಲು ಇರಾನ್ ಒಪ್ಪಿಕೊಂಡಿದೆ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಶ್ವೇತಭವನದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಮೆರಿಕ ಇರಾನ್ ಶಾಂತಿ ಒಪ್ಪಂದದ ಸನಿಹದಲ್ಲಿವೆ ಎಂದು ತಿಳಿಸಿದ್ದಾರೆ. ಈ ಕುರಿತು ಹೆಚ್ಚಿನ ವಿವರಗಳನ್ನು ನೀಡಲು ಅವರು ನಿರಾಕರಿಸಿದ್ದಾರೆ. ಇನ್ನು, ತನ್ನಲ್ಲಿರುವ ಯುರೇನಿಯಂ ದಾಸ್ತಾನನ್ನು ಬಿಟ್ಟುಕೊಡುವ ಬಗ್ಗೆ ಇರಾನ್ ಯಾವುದೇ ಅಧಿಕೃತ ಹೇಳಿಕೆ ಬಿಡುಗಡೆ ಮಾಡಿಲ್ಲ. ಈ ನಡುವೆ, ಅಮೆರಿಕ, ಇರಾನ್ ನಡುವೆ ಮತ್ತೊಂದು ಸುತ್ತಿನ ಮಾತುಕತೆ ಏರ್ಪಡಿಸಲು ಪಾಕಿಸ್ತಾನ ಸಜ್ಜಾಗಿದೆ.

**ಒಪ್ಪಂದಕ್ಕೆ ಬಾರದಿದ್ದರೆ ಮರು ದಾಳಿ:** ಶಾಂತಿ ಒಪ್ಪಂದಕ್ಕೆ ಇರಾನ್ ಸಮ್ಮತಿಸದಿದ್ದರೆ, ಅದರ ಮೇಲೆ ಮತ್ತೆ ವೈಮಾನಿಕ ದಾಳಿ ನಡೆಸುವುದಾಗಿ ಮತ್ತು ದಿಗ್ಬಂದನವನ್ನು ಮುಂದುವರಿಸುವುದಾಗಿ ಅಮೆರಿಕದ ರಕ್ಷಣಾ ಕಾರ್ಯದರ್ಶಿ ಪೀಟ್ ಹೆಸ್ಸೆತ್ ಎಚ್ಚರಿಕೆ ನೀಡಿದ್ದಾರೆ. ಏತನ್ಮಧ್ಯೆ, ಇಸ್ರೇಲ್, ಲೆಬನಾನ್ ನಡುವೆ 10 ದಿನಗಳ ಕದನ ವಿರಾಮ ಜಾರಿಗೆ ಬಂದಿದ್ದು, ಎರಡೂ ದೇಶಗಳ ನಾಯಕರು ನಾಲ್ಕೈದು ದಿನಗಳಲ್ಲಿ ಶ್ವೇತಭವನಕ್ಕೆ ಆಗಮಿಸುವ ನಿರೀಕ್ಷೆಯಿದೆ.

### ಹರ್ಮುಜ್ ಕುರಿತು ಅಮೆರಿಕ ನಮಗೆ ಯಾವುದೇ ಮನವಿ ಮಾಡಿಲ್ಲ

**ಸಿಡ್ನಿ:** ಹೊರ್ಮುಜ್ ಕುರಿತಾಗಿ ಅಮೆರಿಕವು ನಮಗೆ ಯಾವುದೇ ಹೊಸ ಮನವಿಗಳನ್ನು ಮಾಡಿಲ್ಲ ಎಂದು ಆಸ್ಟ್ರೇಲಿಯಾ ಪ್ರಧಾನಿ ಆಂಥೋನಿ ಅಲ್ಬನೀಸ್ ಅವರು ಶುಕ್ರವಾರ ಹೇಳಿದ್ದಾರೆ ಇತ್ತೀಚೆಗೆ ಟ್ರಂಪ್ ಅವರು ಹೊರ್ಮುಜ್ ಕುರಿತ ಆಸ್ಟ್ರೇಲಿಯಾದ ನಿಲುವಿನಿಂದ ನನಗೆ ಬೇಸರವಾಗಿದೆ. ಇರಾನ್‌ನೊಂದಿಗಿನ ಯುದ್ಧದಲ್ಲೂ ಅವರು ನಮಗೆ ಸಹಾಯ ಮಾಡುತ್ತಿಲ್ಲ ಎಂದು ಟೀಕಿಸಿದ್ದರು. ಆಸ್ಟ್ರೇಲಿಯಾವು ಅಮೆರಿಕದ ಮಿತ್ರರಾಷ್ಟ್ರವಾಗಿದೆ. ನಾವು ಇರಾನ್ ಯುದ್ಧದಲ್ಲಿ ನೇರವಾಗಿ ಭಾಗಿಯಾಗಿಲ್ಲ. ಆದರೆ, ಹರ್ಮುಜ್ ಜಲಸಂಧಿಯನ್ನು ತೈಲ ಸಂಚಾರಕ್ಕೆ ಮುಕ್ತವಾಗಿಸುವ ಪರ ನಾವಿದ್ದೇವೆ ಎಂದು ಹೇಳಿದ್ದಾರೆ. ಹರ್ಮುಜ್ ಜಲಸಂಧಿಯನ್ನು ಮುಕ್ತಗೊಳಿಸುವ ಕುರಿತು ಫ್ರಾನ್ಸ್, ಬ್ರಿಟನ್ ಹಾಗೂ ಅಮೆರಿಕದೊಂದಿಗೆ ಮಾತನಾಡಿದ್ದೇವೆ ಎಂದು ಆಸ್ಟ್ರೇಲಿಯಾದ ರಕ್ಷಣಾ ಸಚಿವ ರಿಚರ್ಡ್ ಮಾರ್ಲ್ಸ್ ತಿಳಿಸಿದ್ದಾರೆ. ಪಶ್ಚಿಮ ಏಷ್ಯಾ ಸಂಘರ್ಷದ ವೇಳೆ ಅಮೆರಿಕವು ರಕ್ಷಣಾ ಸಹಾಯ ಮಾಡುವಂತೆ ಮನವಿ ಮಾಡಿತ್ತು, ಆ ವೇಳೆ ನಾವು ಇರಾನ್ ದಾಳಿಯಿಂದ ಯುಎಇ ಅನ್ನು ರಕ್ಷಿಸಲು ಇ7 ವೆಡ್ಜೆಟೈಲ್ ಕಣ್ಗಾವಲು ವಿಮಾನ ಮತ್ತು ಕ್ಷಿಪಣಿಗಳನ್ನು ಕಳುಹಿಸಿದ್ದೆವು ಎಂದು ಹೇಳಿದ್ದಾರೆ.

### ವಿಶ್ವದ ಮೊದಲ ಏರ್ ಟ್ಯಾಕ್ಸಿ ನಿಲ್ದಾಣ ಸಿದ್ಧ: ಈ ವರ್ಷವೇ ಹಾರಾಟ ಶುರು

**ದುಬೈ:** ಜಗತ್ತಿನಲ್ಲಿ ಮೊದಲ ಬಾರಿಗೆ ದುಬೈನಲ್ಲಿ ಏರ್ ಟ್ಯಾಕ್ಸಿ ನಿಲ್ದಾಣ ಸಿದ್ದವಾಗಿದೆ. ಈ ವರ್ಷದ ಅಂತ್ಯದಲ್ಲೇ ಏರ್‌ಟ್ಯಾಕ್ಸಿ ಸಾರ್ವಜನಿಕರ ಓಡಾಟಕ್ಕೆ ಮುಕ್ತವಾಗಲಿದೆ. ಈ ಮೂಲಕ ದುಬೈ ಜನರ ಸಂಚಾರ ವ್ಯವಸ್ಥೆಯಲ್ಲಿ ಮಹತ್ತರ ಬದಲಾವಣೆಯಾಗಲಿದೆ. ಮೊದಲ ನಿಲ್ದಾಣವನ್ನು ದುಬೈ ಅಂತರರಾಷ್ಟ್ರೀಯ ನಿಲ್ದಾಣದಲ್ಲಿ ನಿರ್ಮಿಸಲಾಗಿದ್ದು, ಇನ್ನೂ ನಾಲ್ಕು ನಿಲ್ದಾಣಗಳನ್ನು ನಿರ್ಮಿಸುವ ಗುರಿಯದೆ. ಈ ಬಗ್ಗೆ ದುಬೈ ದೊರೆ, ಶೇಖ್‌ಹಮ್ದಾನ್ ಬಿನ್ ಮೊಹಮದ್ ಬಿನ್ ರಶೀದ್ ಅಲ್ ಮಕೌಮ್‌ಅವರು ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಹಂಚಿಕೊಂಡಿದ್ದು, ದುಬೈ ಏರ್ ಟ್ಯಾಕ್ಸಿ ನಿಲ್ದಾಣದ ಪ್ರಗತಿಯ ಬಗ್ಗೆ ಪರಿಶೀಲನೆ ನಡೆಸಿದೆ. ದುಬೈ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಇರುವ ನಿಲ್ದಾಣದ ನಿರ್ಮಾಣ ಕಾರ್ಯ ಪೂರ್ಣಗೊಂಡಿದೆ. ಈ ವರ್ಷದ ಅಂತ್ಯದ ಹೊತ್ತಿಗೆ ಡೌನ್‌ಟೌನ್, ಪಾಮ್ ಜುಮೇರಿಯಾ, ದುಬೈ ಮರೀನಾ ಬಳಿ ನಿಲ್ದಾಣ ಕಾರ್ಯ ಪೂರ್ಣಗೊಳ್ಳಲಿದೆ ಎಂದಿದ್ದಾರೆ.

### ಕ್ಷೇತ್ರ ಮರುವಿಂಗಡಣೆ ಚೆತಾವಣಿಯಲ್ಲಿ ಮಹಿಳಾ ಮೀಸಲು ಕಾನೂನಿಗೆ ತಿದ್ದುಪಡಿ

**ಕೂಚ್ ಬೆಹಾರ್:** ದೇಶವನ್ನು ಛಿದ್ರ ಮಾಡುವಂತಹ ಕ್ಷೇತ್ರ ಮರುವಿಂಗಡಣೆ ಮಸೂದೆ ತರುವ ಚಿತಾವಣಿಯಲ್ಲಿ ಮಹಿಳಾ ಮೀಸಲಾತಿ ಕಾನೂನಿಗೆ ತಿದ್ದುಪಡಿಯನ್ನು ಉಪಯೋಗಿಸಲಾಗುತ್ತಿದೆ ಎಂದು ಮಮತಾ ಬ್ಯಾನರ್ಜಿ ಆರೋಪಿಸಿದ್ದಾರೆ.

ಟಿಎಂಸಿ ಪ್ರತಿ ಹಂತದಲ್ಲೂ ಕೇಂದ್ರ ಸರ್ಕಾರದ ಈ ನಡೆ ವಿರುದ್ಧ ಹೋರಾಡುತ್ತದೆ ಎಂದು ಅವರು ಇಲ್ಲಿ ನಡೆದ ತಮ್ಮ ಪಕ್ಷದ ಚುನಾವಣಾ ರ್‍ಯಾಲಿಯಲ್ಲಿ ಪ್ರತಿಪಾದಿಸಿದ್ದಾರೆ. ಮಹಿಳಾ ಮೀಸಲಾತಿ ಕಾಯ್ದೆಗೆ ತಿದ್ದುಪಡಿ ತರಲು ಸಂವಿಧಾನಕ್ಕೆ 131ನೇ ತಿದ್ದುಪಡಿ ಮಸೂದೆ ಮಂಡಿಸಲಾಯಿತು. ಇದರ ಜೊತೆಗೆ, ಕ್ಷೇತ್ರ ಪುನರ್ ವಿಂಗಡಣೆ ಮಸೂದೆ ಮತ್ತು ಪ್ರಸ್ತಾಪಿತ ಮಹಿಳಾ ಮೀಸಲಾತಿಯನ್ನು ಕೇಂದ್ರಾಡಳಿತ ಪ್ರದೇಶಗಳಾದ ದೆಹಲಿ, ಪುದುಚೇರಿ, ಜಮ್ಮು ಕಾಶ್ಮೀರದಲ್ಲಿ ಜಾರಿಗೆ ತರುವ ಉದ್ದೇಶದಿಂದ ಕೇಂದ್ರಾಡಳಿತ ಪ್ರದೇಶಗಳ ತಿದ್ದುಪಡಿ ಮಸೂದೆಯನ್ನೂ ಸಹ ಮಂಡಿಸಲಾಗಿತ್ತು.

ಸಂವಿಧಾನ ತಿದ್ದುಪಡಿ ಮಸೂದೆ ಅಡಿ ಲೋಕಸಭೆಯಲ್ಲಿರುವ 543 ಸ್ಥಾನಗಳ ಸಂಖ್ಯೆ ಗರಿಷ್ಠ 850ಕ್ಕೆ ಹೆಚ್ಚಳವಾಗಲಿವೆ. 2011ರ ಜನಗಣತಿ ಅನ್ವಯ 2029ರ ಲೋಕಸಭೆ ಚುನಾವಣೆಗೂ ಮುನ್ನವೇ ಶಾಸನ ಸಭೆಗಳಲ್ಲಿ ಮಹಿಳೆಯರಿಗೆ ಶೇ 33ರಷ್ಟು ಮಹಿಳಾ ಮೀಸಲಾತಿ ಜಾರಿಗೆ ಬರಲಿದೆ ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳಲ್ಲೂ ವಿಧಾನಸಭಾ ಕ್ಷೇತ್ರಗಳ ಸಂಖ್ಯೆ ಹೆಚ್ಚಾಗಲಿವೆ.

## ತೆಲಂಗಾಣದ 89 ಸಾವಿರ ಮಕ್ಕಳು ದಿನಕೂಲಿಯಲ್ಲಿ ಭಾಗಿ: ಜಾತಿ ಸಮೀಕ್ಷೆಯಿಂದ ಬಹಿರಂಗ

**ಹೈದರಾಬಾದ್:** ತೆಲಂಗಾಣದಲ್ಲಿ 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಸುಮಾರು 89 ಸಾವಿರ ಮಕ್ಕಳು ದಿನಕೂಲಿ ಕೆಲಸಗಳಲ್ಲಿ ತೊಡಗಿದ್ದಾರೆ ಎಂಬುದು 2024-25ರಲ್ಲಿ ಕಾಂಗ್ರೆಸ್ ಸರ್ಕಾರ ನಡೆಸಿದ ಜಾತಿ ಸಮೀಕ್ಷೆಯಿಂದ ಬಹಿರಂಗವಾಗಿದೆ ಇತ್ತೀಚೆಗೆ ಬಹಿರಂಗಗೊಂಡ ಸಮೀಕ್ಷಾ ವರದಿ ಪ್ರಕಾರ, 89 ಸಾವಿರ ಬಾಲ ಕಾರ್ಮಿಕರಲ್ಲಿ ಶೇ. 14ರಷ್ಟು ಮಕ್ಕಳು ಮಾದಿಗ (ಎಸ್‌ಸಿ) ಹಾಗೂ ಶೇ 11ರಷ್ಟು ಮಕ್ಕಳು ಲಂಬಾಣಿ (ಎಸ್‌ಟಿ) ಜಾತಿಗೆ ಸೇರಿದವರು ಎಂದು ವರದಿಯಾಗಿದೆ.

ತೆಲಂಗಾಣದಲ್ಲಿ 18 ವರ್ಷಕ್ಕಿಂತ ಕಡಿಮೆ ವಯಸ್ಸಿನವರಲ್ಲಿ ಸುಮಾರು ಒಂದು ಶೇಕಡದಷ್ಟು ಜನರು ದಿನಗೂಲಿ ಕೆಲಸದಲ್ಲಿ ತೊಡಗಿರುವುದು ಕಂಡುಬಂದಿದೆ. ಎಸ್‌ಟಿ ಕೋಲಂ ಸಮುದಾಯದಲ್ಲಿ ಶೇ. 7.2ರಷ್ಟು ಕಂಡುಬಂದಿದ್ದು, ತೀವ್ರ ಆರ್ಥಿಕ ಸಂಕಷ್ಟ, ಶಿಕ್ಷಣ, ಕಲ್ಯಾಣ ಸಹಾಯಗಳಂತಹ ರಕ್ಷಣಾತ್ಮಕ ವ್ಯವಸ್ಥೆಗಳ ಕೊರತೆಯನ್ನು ಎತ್ತಿ ತೋರಿಸುತ್ತದೆ ಎಂದು ವರದಿ ತಿಳಿಸಿದೆ.

ಒಟ್ಟು ಸರಾಸರಿ ಒಂದು ಶೇಕಡಾ ಮಾತ್ರ ಇದ್ದು, ಆದರೆ ಸರಿಯಾದ ದತ್ತಾಂಶವು ಬಹಿರಂಗಪಡಿಸಿಲ್ಲ. ಸಂಪೂರ್ಣ ಸಂಖ್ಯೆಯಲ್ಲಿ ನೋಡುವುದಾದರೆ 18 ವರ್ಷಕ್ಕಿಂತ ಕಡಿಮೆ ವಯಸ್ಸಿನ 89 ಸಾವಿರ ಮಕ್ಕಳು ದಿನಕೂಲಿ ಕಾರ್ಮಿಕರಾಗಿರುವುದು ಕಂಡುಬಂದಿದೆ' ಎಂದು ತೆಲಂಗಾಣ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಉದ್ಯೋಗ, ರಾಜಕೀಯ, ಜಾತಿ ಸಮೀಕ್ಷೆ-2024 ಹೇಳಿದೆ. ಸರಾಸರಿಯಾಗಿ 25ರಿಂದ 65 ವರ್ಷ ವಯಸ್ಸಿನ 31.3 ಜನರು ದಿನಗೂಲಿ ಕೆಲಸದಲ್ಲಿ ತೊಡಗಿಸಿಕೊಂಡಿದ್ದಾರೆ ವರದಿ ಹೇಳುತ್ತದೆ. 56 ಪ್ರಮುಖ ಜಾತಿಗಳಲ್ಲಿ BC-A ಭೋವಿ (ವಡ್ಡರ್) ಜಾತಿಯು ಅತಿ ಹೆಚ್ಚು ಅಂದರೆ ಶೇ. 55ರಷ್ಟು ಪ್ರಮಾಣದಲ್ಲಿ ದಾಖಲಾಗಿದ್ದು, ಇದು ತೀವ್ರ ಆರ್ಥಿಕ ಅನಿಶ್ಚಿತತೆಯನ್ನು ಸೂಚಿಸುತ್ತದೆ. 'ಜಾತಿ ಜನಗಣತಿ' ಎಂದೇ ಪರಿಚಿತವಾಗಿರುವ ತೆಲಂಗಾಣ SEEEPC ಸಮೀಕ್ಷೆ, 3.55 ಕೋಟಿ ಜನರ ಸ್ಥಿತಿಯನ್ನು ದಾಖಲಿಸಿದ್ದು, ಪ್ರತಿಯೊಬ್ಬ ವ್ಯಕ್ತಿಗೆ ಸಂಬಂಧಿಸಿದ 75 ಅಂಶಗಳ ಮಾಹಿತಿಯನ್ನು ಒಳಗೊಂಡಿದೆ. ಇದು 'ತೆಲಂಗಾಣ ಸಮಾಜದ ಆರೋಗ್ಯ' ಕುರಿತು ಸಮಗ್ರ ಒಳನೋಟವನ್ನು ನೀಡುತ್ತದೆ.



# ನನಗೂ ಮೋದಿ ಅವರಿಗೆ ಪತ್ನಿ ಚಿಂತೆ ಇಲ್ಲ

## ಮಹಿಳಾ ಮೀಸಲಾತಿ ಮಸೂದೆ ಚರ್ಚೆಯಲ್ಲಿ ರಾಹುಲ್ ಗಾಂಧಿ ಹಾಸ್ಯ ಚಟಾಕಿ

**ಹೊಸದಿಲ್ಲಿ:** ನನಗೂ ಮತ್ತು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಗೆ ಮನೆಯಲ್ಲಿ ಪತ್ನಿಯ ಚಿಂತೆ ಇಲ್ಲ. ಹೀಗಾಗಿ ಮಹಿಳಾ ಮೀಸಲಾತಿ ಮಸೂದೆ ಬಗ್ಗೆ ನಾವಿಬ್ಬರೂ ನಿರಾಂತಕವಾಗಿ ಮಾತನಾಡಬಹುದು.. ಇದು ಲೋಕಸಭೆಯಲ್ಲಿ ಶುಕ್ರವಾರ ಮಹಿಳಾ ಮೀಸಲಾತಿ ಮಸೂದೆ ವಿರೋಧಿಸಿ ಭಾಷಣ ಆರಂಭಿಸಿದ ವಿಪಕ್ಷ ನಾಯಕ ರಾಹುಲ್ ಗಾಂಧಿ ಆಡಿದ ಮಾತು. ಮೊದಲ ಸತ್ಯವೆಂದರೆ ಇದು ಮಹಿಳಾ ಮೀಸಲಾತಿ ಮಸೂದೆಯಲ್ಲ. ಇದಕ್ಕೂ ಮಹಿಳಾ ಸಬಲೀಕರಣಕ್ಕೂ ಯಾವುದೇ ಸಂಬಂಧವಿಲ್ಲ. ಇದು ಭಾರತದ ಚುನಾವಣಾ ನಕ್ಷೆಯನ್ನು ಬದಲಾಯಿಸುವ ಪ್ರಯತ್ನವಾಗಿದೆ ಎಂದು ರಾಹುಲ್ ಗಾಂಧಿ ತಮ್ಮ ಭಾಷಣದಲ್ಲಿ ಅಬ್ಬರಿಸಿದರು.

- ಮಹಿಳಾ ಮೀಸಲಾತಿ ಮಸೂದೆ ವಿರೋಧಿ ಲೋಕಸಭೆಯಲ್ಲಿ ರಾಹುಲ್ ಗಾಂಧಿ ಭಾಷಣ.
- ಲೋಕಸಭೆ ಭಾಷಣದಲ್ಲಿ ಪ್ರಧಾನಿ ಮೋದಿ ಮತ್ತು ತಮ್ಮ ವೈವಾಹಿಕ ಜೀವನದ ಬಗ್ಗೆ ರಾಹುಲ್ ಗಾಂಧಿ ಉಲ್ಲೇಖ.
- ನನಗೂ, ಪ್ರಧಾನಿ ಮೋದಿ ಅವರಿಗೂ ಹೆಂಡತಿಯ ಚಿಂತೆ ಇಲ್ಲ ಎಂದ ರಾಹುಲ್‌ಗಾಂಧಿ.

ಎಂಬ ರಾಹುಲ್ ಗಾಂಧಿ ಆರೋಪ ಲೋಕಸಭೆಯಲ್ಲಿ ಭಾರೀ ಗದ್ದಲಕ್ಕೆ ಕಾರಣವಾಗಿದೆ. ಲೋಕಸಭೆಯಲ್ಲಿ ಶುಕ್ರವಾರ ಬೆಳಗ್ಗೆ ಕ್ಷೇತ್ರ ಮರುವಿಂಗಡಣೇ ಮಸೂದೆ ವಿರೋಧಿಸಿ ಶಶಿ ತರೂರ್ ಭಾಷಣ ಮಾಡಿದ್ದರು. ತಮ್ಮ ಭಾಷಣದ ಆರಂಭದಲ್ಲಿ ಲೋಕಸಭೆ ವಿಪಕ್ಷ ನಾಯಕ ತಮ್ಮ, ಪ್ರಧಾನಮಂತ್ರಿ ಅವರ ವೈವಾಹಿಕ ಜೀವನದ ಬಗ್ಗೆ ಪ್ರಸ್ತಾಪಿಸಿದ್ದು, ಇಬ್ಬರಿಗೂ ಪತ್ನಿಯರ ಚಿಂತೆ ಇಲ್ಲ ಎಂದು ಹೇಳಿರುವುದು ಕೂಡ ಭಾರೀ ಚರ್ಚೆಗೆ ಗ್ರಾಸವಾಗಿದೆ. ಆದರೆ ಪ್ರಧಾನಿ ಮೋದಿ ಅವರನ್ನು ರಾಹುಲ್ ಗಾಂಧಿ ಜಾದೂಗಾರ ಎಂದು ಕರೆದಿರುವುದು ಆಡಳಿತ ಪಕ್ಷದ ಸದಸ್ಯರ ತೀವ್ರ ಆಕ್ರೋಶಕ್ಕೆ ಗುರಿಯಾಗಿದೆ. ಭಾರತೀಯ ಸಮಾಜವು ದಲಿತರು ಮತ್ತು ಒಬಿಸಿಗಳು ಮತ್ತು ಅವರ ಮಹಿಳೆಯರನ್ನು ಹೇಗೆ ನಡೆಸಿಕೊಂಡಿದೆ ಎಂಬ ಐತಿಹಾಸಿಕ ಸತ್ಯವನ್ನು ನಾವು ಯಾರೂ ಮರೆಮಾಚಲು ಬರುವುದಿಲ್ಲ.

ಆದರೆ ಕೇಂದ್ರ ಸರ್ಕಾರ ಈಗ ಜಾರಿಗೆ ತರಲು ಮುಂದಾಗಿರುವ ಮಸೂದೆ ಜಾತಿ ಜನಗಣತಿಯನ್ನು ಮರೆಮಾಚುವುದು ಮತ್ತು ಒಬಿಸಿ ಸಮುದಾಯದ ನನ್ನ ಸಹೋದರ-ಸಹೋದರಿಯರಿಗೆ ಅಧಿಕಾರದಿಂದ ವಂಚಿತರನ್ನಾಗಿ ಮಾಡುವ ಗುರಿ ಹೊಂದಿದೆ ಎಂದು ರಾಹುಲ್ ಗಾಂಧಿ ಗಂಭೀರ ಆರೋಪ ಮಾಡಿದರು. ಬಿಜೆಪಿ ಭಾರತದ ನಕ್ಷೆಯನ್ನು ಮರುರೂಪಿಸಲು ಬಯಸುತ್ತದೆ. ಏಕೆಂದರೆ ಆ ಪಕ್ಷ ದೇಶಾದ್ಯಂತ ತನ್ನ ಶಕ್ತಿಯ ಸವೆತದ ಭಯವನ್ನು ಎದುರಿಸುತ್ತಿದೆ. ಕ್ಷೇತ್ರಮರುವಿಂಗಡಣೆ ಮೂಲಕ ತನ್ನ ರಾಜಕೀಯ ಅಸ್ತಿತ್ವ ಉಳಿಸಿಕೊಳ್ಳುವ ಪ್ರಯತ್ನ ಮಾಡುತ್ತಿದೆ

### ಬಿಜೆಪಿ ಅಸಲಿಗೆ ಮಹಿಳಾ ಸಬಲೀಕರಣದ ವಿರೋಧಿ

**ಮಹಿಳಾ ಮೀಸಲಾತಿ ಮಸೂದೆ ವಿರೋಧಿಸಿ ಲೋಕಸಭೆಯಲ್ಲಿ ಇಂದು ಶುಕ್ರವಾರ ಭಾಷಣ ಮಾಡಿದ ವಿಪಕ್ಷ ನಾಯಕ ರಾಹುಲ್ ಗಾಂಧಿ, ಭಾಷಣದ ಆರಂಭದಲ್ಲಿ ತಮಗೂ ಮತ್ತು ಪ್ರಧಾನಿ ಮೋದಿ ಅವರಿಗೂ ಜೀವನದಲ್ಲಿ ಪತ್ನಿಯ ಚಿಂತೆ ಇಲ್ಲ ಎಂದು ಹೇಳಿದ್ದಾರೆ. ಮಹಿಳಾ ಮೀಸಲಾತಿ ಮಸೂದೆಯನ್ನು ಭಾರತದ ಚುನಾವಣಾ ನಕ್ಷೆಯನ್ನು ಬದಲಿಸುವ ಹುನ್ನಾರ ಎಂದು ಆರೋಪಿಸಿರುವ ರಾಹುಲ್ ಗಾಂಧಿ, ಬಿಜೆಪಿ ಅಸಲಿಗೆ ಮಹಿಳಾ ಸಬಲೀಕರಣದ ವಿರೋಧಿ ಎಂದು ಗುಡುಗಿದ್ದಾರೆ.**

ಎಂದು ಕಾಂಗ್ರೆಸ್ ಸಂಸದ ಹರಿಹಾಯ್ದರು. ಗುರುವಾರ ಲೋಕಸಭೆಯಲ್ಲಿ ಪ್ರಧಾನಿ ಮೋದಿ ಮಹಿಳಾ ಮೀಸಲಾತಿ ಬೆಂಬಲಿಸಿ ಭಾಷಣ ಮಾಡಿದ್ದರು. ತಮ್ಮ ಭಾಣಷದಲ್ಲಿ ಪ್ರಧಾನಿ ಮೋದಿ ಅವರನ್ನು ಜಾದೂಗಾರ ಎಂದು ಕರೆದ ರಾಹುಲ್ ಗಾಂಧಿ, ಈ ಜಾದೂಗಾರ, ಕೆಲವು ಉದ್ಯಮಿಗಳ ನಡುವೆ ಪಾಲುದಾರಿಕೆ ಇದೆ ಎಂದು ಗಂಭೀರ ಆರೋಪ ಮಾಡಿದರು. ವಿಪಕ್ಷ ನಾಯಕನ ಈ ಹೇಳಿಕೆಯಿಂದ ತೀವ್ರವಾಗಿ ಕೆರಳಿದ ಆಡಳಿತ ಪಕ್ಷದ ಸದಸ್ಯರು, ವಿಷಯಾಂತರ ಮಾಡದಂತೆ ತಾಕೀತು ಮಾಡಿದರು. ಇನ್ನು ತಮ್ಮ ಭಾಷಣದಲ್ಲಿ ಆಪರೇಷನ್ ಸಿಂಧೂರ, ಬಾಲಾಕೋಟ್ ದಾಳಿಯನ್ನು ಉಲ್ಲೇಖಿಸಿ, ನಮ್ಮ ಜಾದೂಗಾರ ಪ್ರಧಾನಿ ಸಶಸ್ತ್ರ ಪಡೆಗಳ ಹಿಂದೆ ಹೇಡಿಯಂತೆ ಅಡಗಿ ಕುಳಿತಿದ್ದಾರೆ ಎಂದು ರಾಹುಲ್ ಗಾಂಧಿ ಹೇಳಿದರು. ಇದರಿಂದ ಕೆರಳಿ ಕೆಂಡವಾದ ಆಡಳಿತ ಪಕ್ಷದ ಸದಸ್ಯರು ಒಟ್ಟಾಗಿ ವಿಪಕ್ಷ ನಾಯಕನ ಮೇಲೆ ಮುಗಿಬಿದ್ದರು. ಒಟ್ಟಿನಲ್ಲಿ ಮಹಿಳಾ ಮೀಸಲಾತಿ ಮಸೂದೆ ಮತ್ತು ಕ್ಷೇತ್ರ ಪುನರ್‌ವಿಂಗಡಣೆ ಬಗ್ಗೆ ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಅವರು ಮಾಡಿರುವ ಭಾಷಣ, ಸದನದಲ್ಲಿ ತೀವ್ರ ಕೋಲಾಹಲಕ್ಕೆ ಕಾರಣವಾಗಿದೆ ಎಂದು ಹೇಳಬಹುದು. ನಿನ್ನೆ ಲೋಕಸಭೆಯಲ್ಲಿ ಮಾತನಾಡುತ್ತಾ, ಕ್ಷೇತ್ರ ಪುನರ್ ವಿಂಗಡಣೆ ದಕ್ಷಿಣದ ರಾಜ್ಯಗಳಿಗೆ ಅನ್ಯಾಯ ಮಾಡದು ಎಂದಿದ್ದ ಅಮಿತ್ ಶಾ, ಪ್ರತಿಪಕ್ಷಗಳ ಸುಳ್ಳು ನಿರೂಪಣೆ ವಿರುದ್ಧ ಹರಿಹಾಯ್ದಿದ್ದರು.

**ರಾಹುಲ್ ಗಾಂಧಿ ಅವರ ಹೇಳಿಕೆಗೆ ತೀವ್ರ ವಿರೋಧ ವ್ಯಕ್ತಪಡಿಸಿದ ರಕ್ಷಣಾ ಸಚಿವ ರಾಜನಾಥ್ ಸಿಂಗ್, ವಿಪಕ್ಷ ನಾಯಕ ಪ್ರಧಾನಿ ಹುದ್ದೆಯ ಘನತೆಗೆ ಧಕ್ಕೆ ತರಬಾರದು. ಪ್ರಧಾನಿ ಮೋದಿ ಅವರನ್ನು ಜಾದೂಗಾರ ಎಂದು ಕರೆಯುವುದನ್ನು ಯಾವುದೇ ಕಾರಣಕ್ಕೂ ಒಪ್ಪಿಕೊಳ್ಳುವುದಿಲ್ಲ ಎಂದು ಗುಡುಗಿದರು. ಇದೇ ವಿಚಾರವಾಗಿ ಮಾತನಾಡಿದ ಕೇಂದ್ರ ಸಚಿವ ಕಿರಣ್ ರಿಜಿಜು, ರಾಹುಲ್ ಗಾಂಧಿ ವಿಷಯಾಂತರ ಮಾಡುತ್ತಿದ್ದಾರೆ. ಮಹಿಳಾ ಮೀಸಲಾತಿ ಮಸೂದೆ ಮತ್ತು ಕ್ಷೇತ್ರ ಪುನರ್‌ವಿಂಗಡಣೆ ಬಗ್ಗೆ ಅವರು ತಮ್ಮ ಅಭಿಪ್ರಾಯ ತಿಳಿಸಲಿ, ಒಂದು ವೇಳೆ ಅವರು ಮಹಿಳಾ ಮೀಸಲಾತಿ ಮಸೂದೆಯನ್ನು ವಿರೋಧಿಸಿದರೆ, ದೇಶದ ಮಹಿಳೆಯರು ಕಾಂಗ್ರೆಸ್‌ಗೆ ತಕ್ಕ ಪಾಠ ಕಲಿಸಲಿದ್ದಾರೆ.**

**-ರಾಹುಲ್ ಗಾಂಧಿ ವಿಪಕ್ಷ ನಾಯಕ**



ಕೇಂದ್ರ ಸರ್ಕಾರ ಮಹಿಳಾ ಸಬಲೀಕರಣ ಉದ್ದೇಶದಿಂದ ಈ ಮಸೂದೆ ಜಾರಿಗೆ ತರುತ್ತಿಲ್ಲ

## 8ನೇ ವೇತನ ಆಯೋಗ: ಮೂಲ ವೇತನ ಸಂರಚನೆಯಲ್ಲಿ ಬದಲಾವಣೆ

**ನವದೆಹಲಿ:** ವೇತನ ಆಯೋಗದ ಶಿಫಾರಸಿನ ಮೇಲೆ, ಕೇಂದ್ರ ಸರ್ಕಾರ ತನ್ನ ಉದ್ಯೋಗಿಗಳಿಗೆ ವೇತನ ಹಾಗೂ ಪಿಂಚಣಿ ಹೆಚ್ಚಳ ಮಾಡಲು ನಿರ್ಧರಿಸಿದೆ. ಈಗಾಗಲೇ ಪ್ರಧಾನಿ ನರೇಂದ್ರ ಮೋದಿ ಅವರು 8ನೇ ವೇತನ ಆಯೋಗವನ್ನು ಕಳೆದ ವರ್ಷ ರಚನೆ ಮಾಡಿದ್ದರು. ನೌಕರರ ವಿವಿಧ ಸಂಘಟನೆಗಳು ವೇತನ, ಭತ್ಯೆ ಹೆಚ್ಚಳ, ಒಟ್ಟಾರೆ ವೇತನ ಸಂರಚನೆಯ ಬದಲಾವಣೆಗಾಗಿ ಆಯೋಗಕ್ಕೆ ಮನವಿ ಸಲ್ಲಿಸಿದ್ದವು. ಸಂಘಟನೆಗಳ ಸಲಹೆ ಸೂಚನೆಗಳನ್ನು ಪುರಸ್ಕರಿಸಿದ ಆಯೋಗ ಹಲವು ಬದಲಾವಣೆಗಳನ್ನು ಸೂಚಿಸಿ ಸರ್ಕಾರಕ್ಕೆ ಶಿಫಾರಸು ಮಾಡಿದೆ.

8ನೇ ವೇತನ ಆಯೋಗ ಕೇಂದ್ರದಿಂದ ಅನುಮೋದನೆಗೊಂಡರೆ ಇದೇ ವರ್ಷ ಜನವರಿ 2026ರಿಂದ 8ನೇ ವೇತನ ಆಯೋಗ ಜಾರಿಯಾಗಲಿದೆ. ಹಿಂದಿನ ತಿಂಗಳುಗಳ ಬಾಕಿಯನ್ನು ನೌಕರರಿಗೆ ಪಾವತಿಸಲಾಗುವುದು.

### ಏನೇನು ಬದಲಾಗುತ್ತದೆ



- ಮೂಲ ವೇತನ ಪರಿಷ್ಕರಣೆ
- ಒಟ್ಟಾರೆ ವೇತನ ಸಂರಚನೆಯಲ್ಲಿ ಬದಲಾವಣೆ
- ಭತ್ಯೆ ಮತ್ತು ಪಿಂಚಣಿಗಳ ಹೆಚ್ಚಳ

ತುಟ್ಟಿಭತ್ಯೆ, ಮನೆ ಬಾಡಿಗೆ ಭತ್ಯೆ, ಸಾರಿಗೆ ಭತ್ಯೆ ಮತ್ತು ಪಿಂಚಣಿಯನ್ನು ಪರಿಷ್ಕೃತ ಮೂಲ ವೇತನದ ಆಧಾರದ ಮೇಲೆ ನಿರ್ಧರಿಸಲಾಗುತ್ತದೆ.

ಫಿಟೆಂಟ್ ಫ್ಯಾಕ್ಟರ್‌ಗೆ ಮನವಿ. ಕೇಂದ್ರ ಸರ್ಕಾರಿ ನೌಕರರ ಪ್ರಮುಖ ಸಂಘಟನೆಯಾದ ಜೆಸಿಎಂ ಸಂಘವು ಶೇ 3.83ರಷ್ಟು ಫಿಟೆಂಟ್ ಫ್ಯಾಕ್ಟರ್ ನೀಡುವಂತೆ ಪ್ರಸ್ತಾವನೆ ಸಲ್ಲಿಸಿದೆ. ಪ್ರಸ್ತುತ ಪಡೆಯುತ್ತಿರುವ ಮೂಲ ವೇತನಕ್ಕೆ ಶೇ 3.83 ಅನ್ನು ಗುಣಿಸುವುದೇ ಫಿಟೆಂಟ್ ಫ್ಯಾಕ್ಟರ್ ಆಗಿದೆ. ಕನಿಷ್ಠ ವೇತನ 69 ಸಾವಿರಕ್ಕೆ ಬೇಡಿಕೆ. ನೌಕರರ ಸಂಘಟನೆಗಳು ಮೂಲ ವೇತನವನ್ನು 69 ಸಾವಿರಕ್ಕೆ ಹೆಚ್ಚಿಸಲು ಬೇಡಿಕೆ ಸಲ್ಲಿಸಿವೆ. ಹಣದುಬ್ಬರ, ವಸತಿ, ಶಿಕ್ಷಣ ಮತ್ತು ಆರೋಗ್ಯ ವೆಚ್ಚಗಳು ಗಣನೀಯವಾಗಿ ಏರಿಕೆಯಾಗಿರುವುದರಿಂದ ಮೂಲ ವೇತನವನ್ನು ಹೆಚ್ಚಿಸಬೇಕು ಎಂದು ಸಂಘಟನೆಗಳು ಬೇಡಿಕೆ ಸಲ್ಲಿಸಿವೆ. ಕನಿಷ್ಠ ಮೂಲ ವೇತನವನ್ನು 18 ಸಾವಿರದಿಂದ 69 ಸಾವಿರಕ್ಕೆ ಹೆಚ್ಚಿಸಲು ಒತ್ತಾಯಿಸಿರುವುದನ್ನು ಸರ್ಕಾರ ಒಪ್ಪುತ್ತದೆಯೇ ಎಂಬುದು ಬೇರೆ ಮಾತು. ಈ ಉದ್ದೇಶಿತ ವೇತನ ವೇತನ ಆಯೋಗ ಜಾರಿಯನ್ನು ಅಂತಿಮವಾಗಿ ಕೇಂದ್ರ ಸರ್ಕಾರ ನಿರ್ಧಾರ ಮಾಡುತ್ತದೆ.

## ಊಸರವಳ್ಳಿ ರೀತಿ ಕಾಂಗ್ರೆಸ್ ಬಣ್ಣ ಬದಲಿಸುತ್ತಿದೆ

**ಲಖನೌ:** ಮಹಿಳಾ ಮೀಸಲಾತಿಯ ವಿಷಯದಲ್ಲಿ ಕಾಂಗ್ರೆಸ್ ಮತ್ತು ಸಮಾಜವಾದಿ ಪಕ್ಷಗಳು ಊಸರವಳ್ಳಿ ರೀತಿ ಬಣ್ಣ ಬದಲಾಯಿಸುತ್ತಿವೆ ಎಂದು ಬಿಎಸ್‌ಪಿ ಮುಖ್ಯಸ್ಥೆ ಮಾಯಾವತಿ ಅವರು ಶುಕ್ರವಾರ ಆರೋಪಿಸಿದ್ದಾರೆ. ಮಹಿಳಾ ಮೀಸಲಾತಿ ಕುರಿತು ಸಂಸತ್ತಿನಲ್ಲಿ ಚರ್ಚೆಯಾಗುತ್ತಿರುವ ಬೆನ್ನಲ್ಲೇ ಅವರು ಹೇಳಿಕೆ ನೀಡಿದ್ದಾರೆ.

ಈ ಕುರಿತು ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಮಾಯಾವತಿ, ಕಾಂಗ್ರೆಸ್ ಪಕ್ಷವು ಕೇಂದ್ರದಲ್ಲಿ ಅಧಿಕಾರದಲ್ಲಿದ್ದಾಗ ಎಸ್‌ಸಿ, ಎಸ್‌ಟಿ ಹಾಗೂ ಒಬಿಸಿ ಸಮುದಾಯದ ಮಹಿಳೆಯರ ಮೀಸಲಾತಿ ಕುರಿತು ಯಾವುದೇ ಕ್ರಮಗಳನ್ನು ತೆಗೆದುಕೊಂಡಿರಲಿಲ್ಲ. ಆದರೆ, ಈಗ ಮಾತನಾಡುತ್ತಿದ್ದಾರೆ. ದೇಶದಲ್ಲಿರುವ ಯಾವುದೇ ಪಕ್ಷಗಳು ಕೂಡ ಹಿಂದುಳಿದವರ ಅಭಿವೃದ್ಧಿಯ ಬಗ್ಗೆ ಚಿಂತಿಸುತ್ತಿಲ್ಲ' ಎಂದು ಕಿಡಿಕಾರಿದ್ದಾರೆ.

ಮಂಡಲ್ ಆಯೋಗದ ವರದಿ ಪ್ರಕಾರ ಶಿಕ್ಷಣ ಹಾಗೂ ಸರ್ಕಾರಿ ಹುದ್ದೆಗಳಲ್ಲಿ ಒಬಿಸಿ ಸಮುದಾಯಕ್ಕೆ ಶೇ 27ರಷ್ಟು ಮೀಸಲಾತಿ ನೀಡುವುದನ್ನು ಕೂಡ ಅವರು ಜಾರಿಗೊಳಿಸಲಿಲ್ಲ. ವಿ.ಪಿ ಸಿಂಗ್ ಅವರು ಪ್ರಧಾನಿಯಾದ



ನಂತರ ಅದು ಜಾರಿಗೊಂಡಿತು ಎಂದು ಹೇಳಿದ್ದಾರೆ.

ಉತ್ತರ ಪ್ರದೇಶದಲ್ಲಿ ಸಮಾಜವಾದಿ ಪಕ್ಷವು ಅಧಿಕಾರದಲ್ಲಿದ್ದಾಗಲೂ ಕೂಡ ಅವರು 1994ರಲ್ಲಿ ಹಿಂದುಳಿದ ವರ್ಗಗಳ ಆಯೋಗದ ವರದಿಯನ್ನು ಪಕ್ಕಕ್ಕಿಟ್ಟರು. ಬಿಎಸ್‌ಪಿ ಸರ್ಕಾರವು ಅಧಿಕಾರಕ್ಕೆ ಬಂದ ತಕ್ಷಣವೇ 1995ರಲ್ಲಿ ಅದನ್ನು ಜಾರಿಗೊಳಿಸಿದೆವು. ಆದರೆ ಇದೀಗ ಅವರು ಬಣ್ಣ ಬದಲಾಯಿಸಿ, ರಾಜಕೀಯ ಉದ್ದೇಶದಿಂದ ಮಹಿಳಾ ಮೀಸಲಾತಿಯ ಕುರಿತು ಮಾತನಾಡುತ್ತಿದ್ದಾರೆ ಎಂದು ಟೀಕಿಸಿದ್ದಾರೆ.

## ಅಮೆರಿಕ-ಇರಾನ್ ಎರಡನೇ ಸುತ್ತಿನ ಮಾತುಕತೆಗೆ ಪಾಕಿಸ್ತಾನದಲ್ಲಿ ಸಿದ್ಧತೆಗಳು ಆರಂಭ

**ಇಸ್ಲಾಮಾಬಾದ್:** ಅಮೆರಿಕ ಮತ್ತು ಇರಾನ್ ನಡುವಿನ ಎರಡನೇ ಸುತ್ತಿನ ಶಾಂತಿ ಮಾತುಕತೆಗೆ ಆತಿಥ್ಯ ವಹಿಸಲು ಪಾಕಿಸ್ತಾನ ಸಿದ್ಧತೆ ನಡೆಸುತ್ತಿದೆ ಎಂದು ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ. ಕಳೆದ ವಾರ ಇಸ್ಲಾಮಾಬಾದ್‌ನಲ್ಲಿ ನಡೆದ ಮೊದಲ ಸುತ್ತಿನ ಮಾತುಕತೆ ಯಾವುದೇ ಒಪ್ಪಂದವಿಲ್ಲದೆ ಮುಕ್ತಾಯಗೊಂಡಿತ್ತು. ಉಭಯ ದೇಶಗಳನ್ನು ಮತ್ತೆ ಮಾತುಕತೆಯ ಒಪ್ಪಿಸಲು ತೀವ್ರ ರಾಜತಾಂತ್ರಿಕ ಚಟುವಟಿಕೆಗಳು ನಡೆದಿವೆ ಎಂದು ಪಾಕಿಸ್ತಾನದ ಅಧಿಕೃತ ಮೂಲಗಳು ಶುಕ್ರವಾರ ತಿಳಿಸಿವೆ.

ಎರಡೂ ರಾಷ್ಟ್ರಗಳು ಎರಡು ವಾರಗಳ ತಾತ್ಕಾಲಿಕ ಕದನ ವಿರಾಮವನ್ನು ಪಾಲಿಸುತ್ತಿರುವುದರಿಂದ, ಪಾಕಿಸ್ತಾನದ ಮಧ್ಯಸ್ಥಿಕೆಯ ಪ್ರಯತ್ನಗಳು ಯಶಸ್ವಿಯಾಗುವ ಮುನ್ಸೂಚನೆ ಸಿಕ್ಕಿದೆ. ಪ್ರಧಾನಿ




ಶೆಹಬಾಜ್ ಷರೀಫ್ ಬುಧವಾರದಿಂದ ಮೂರು ರಾಷ್ಟ್ರಗಳ ಪ್ರವಾಸ ಕೈಗೊಂಡಿದ್ದರೆ, ಫೀಲ್ಡ್ ಮಾರ್ಷಲ್ ಅಸಿಮ್‌ಮುನೀರ್ ಟೆಹರಾನ್ ತಲುಪಿದ್ದಾರೆ.

ಷರೀಫ್ ಸೌದಿ ಮತ್ತು ಕತಾರ್ ನಾಯಕರೊಂದಿಗೆ ಚರ್ಚಿಸಿ ಗುರುವಾರ ರಾತ್ರಿ ಟರ್ಕಿಗೆ ತೆರಳಿದ್ದಾರೆ. ಇತ್ತ ಫೀಲ್ಡ್ ಮಾರ್ಷಲ್ ಮುನೀರ್ ಅವರು ಇರಾನ್‌ನಲ್ಲಿ 24 ಗಂಟೆಗಳಿಗೂ ಹೆಚ್ಚು ಕಾಲ ತಂಗಿದ್ದು, ಅಲ್ಲಿನ ರಾಜಕೀಯ ಮತ್ತು ಸೇನಾ ನಾಯಕರನ್ನು ಭೇಟಿ ಮಾಡಿದ್ದಾರೆ. ಮಾತುಕತೆಯ ಫಲಿತಾಂಶದ ಬಗ್ಗೆ ಅಧಿಕೃತವಾಗಿ ಏನನ್ನೂ ಹೇಳದಿದ್ದರೂ, ಗುರುವಾರ ಸಂಜೆಯಿಂದ ಭದ್ರತಾ ಅಧಿಕಾರಿಗಳು ಹಠಾತ್ ಸಕ್ರಿಯರಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇಸ್ಲಾಮಾಬಾದ್ ಮತ್ತು ನೆರೆಯ ರಾವಲ್ಪಿಂಡಿಯಲ್ಲಿ ಸಿದ್ಧತೆಗಳು ಪ್ರಾರಂಭವಾಗಿವೆ. ಇತರ ಪ್ರಾಂತ್ಯಗಳಿಂದ ಸಾವಿರಾರು ಪೊಲೀಸ್, ಅರೆಸೇನಾ ಸಿಬ್ಬಂದಿ ಆಗಮಿಸುತ್ತಿದ್ದಾರೆ' ಎಂದು ಇಸ್ಲಾಮಾಬಾದ್ ಅಧಿಕಾರಿಗಳು ತಿಳಿಸಿದ್ದಾರೆ.

ಮೊದಲ ಸುತ್ತಿನ ಮಾತುಕತೆಯ ಸಂದರ್ಭದಲ್ಲಿ 10,000ಕ್ಕೂ ಹೆಚ್ಚು ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು. ಅಂತೆಯೇ, ಇಸ್ಲಾಮಾಬಾದ್, ರಾವಲ್ಪಿಂಡಿ ಜಿಲ್ಲಾ ಅಧಿಕಾರಿಗಳು ಸಾರಿಗೆ ಕಂಪನಿಗಳನ್ನು ಸಂಪರ್ಕಿಸಿದ್ದು, ನಗರಕ್ಕೆ ಬರುವ ಮತ್ತು ಹೋಗುವ ಸಂಚಾರದ ಮೇಲೆ ಕಟ್ಟುನಿಟ್ಟಿನ ನಿರ್ಬಂಧಗಳನ್ನು ಹೇರುವ ಸಾಧ್ಯತೆಯಿದೆ ಎಂದು ತಿಳಿಸಿದ್ದಾರೆ. ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿರುವ ಸಂದೇಶದ ಪ್ರಕಾರ, ಈ ನಿರ್ಬಂಧಗಳು ಮುಂದಿನ ವಾರದ ಅಂತ್ಯದವರೆಗೆ ಮುಂದುವರಿಯಬಹುದು. ನಾಗರಿಕರು ಅನಗತ್ಯ ಪ್ರಯಾಣವನ್ನು ತಪ್ಪಿಸುವಂತೆ ಸೂಚಿಸಲಾಗಿದೆ. ಸಂಚಾರ ದಟ್ಟಣೆಯನ್ನು ಕಡಿಮೆ ಮಾಡಲು ವಿಮಾನ ನಿಲ್ದಾಣದ ಸಮೀಪವಿರುವ ಮಾರುಕಟ್ಟೆಗಳು ಮತ್ತು ಶಿಕ್ಷಣ ಸಂಸ್ಥೆಗಳನ್ನು ಮುಚ್ಚುವ ಸಾಧ್ಯತೆಯಿದೆ.

# 10 ದಿನಗಳ ಕದನವಿರಾಮ ಘೋಷಿಸಿದ ಟ್ರಂಪ್

## ಈವರೆಗೂ 9 ಯುದ್ಧಗಳನ್ನು ನಿಲ್ಲಿಸಿದ್ದು, ಇದು ತಾನು ನಿಲ್ಲಿಸುತ್ತಿರುವ 10ನೇ ಯುದ್ಧ ಎಂದು ಸೆಲ್ಫ್ ಕ್ರೆಡಿಟ್ ಪಡೆದುಕೊಂಡ ಅಧ್ಯಕ್ಷ

**ವಾಷಿಂಗ್ಟನ್:** ಮಧ್ಯಪ್ರಾಚ್ಯದಲ್ಲಿ ಉದ್ವಿಗ್ನತೆ ನಡುವೆ ಇಸ್ರೇಲ್- ಲೆಬನಾನ್ ನಡುವಿನ ಸಂಘರ್ಷ ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ 10 ದಿನಗಳ ಕದನವಿರಾಮವನ್ನು ಘೋಷಿಸಿದ್ದಾರೆ. ಅಲ್ಲದೆ, ಇದನ್ನು ತಾವು ನಿಲ್ಲಿಸಿದ 10ಯುದ್ಧ ಎಂದು ಬಣ್ಣಿಸಿದ್ದಾರೆ. ಮಧ್ಯಪ್ರಾಚ್ಯದಲ್ಲಿ ಇರಾನ್ ಯುದ್ಧದ ಜೊತೆಗೆ ಇಸ್ರೇಲ್, ಲೆಬನಾನ್ ನಡುವಿನ ಯುದ್ಧ ಮತ್ತಷ್ಟು ತಲೆನೋವಾಗಿ ಪರಿಣಮಿಸಿತ್ತು. ಇದನ್ನು ಶಮನಗೊಳಿಸಲು ಉಭಯದೇಶಗಳ ಅಧಿಕಾರಿಗಳ ನಿಯೋಗವನ್ನು ವಾಷಿಂಗ್ಟನ್ ನಲ್ಲಿ ಸುಮಾರು 3ದಶಕಗಳ ಬಳಿಕ ನೇರ ರಾಜತಾಂತ್ರಿಕ ಮಾತುಕತೆಯಲ್ಲಿ ಭಾಗಿಯಾಗಿದ್ದರು. ಈ ಬೆನ್ನಲ್ಲೇ, ಇದೀಗ ಡೊನಾಲ್ಡ್ ಟ್ರಂಪ್ ತಮ್ಮ ಟ್ರುತ್ ಸೋಶಿಯಲ್ ಖಾತೆಯ ಮೂಲಕ ಉಭಯದೇಶಗಳ ನಡುವಿನ 10 ದಿನಗಳ ಕದನವಿರಾಮವನ್ನು ಘೋಷಿಸಿದ್ದಾರೆ.

**ಇಸ್ರೇಲ್-ಲೆಬನಾನ್ ನಡುವೆ 10ದಿನಗಳ ಕದನ ವಿರಾಮ ಘೋಷಣೆ:** ಈ ಕುರಿತು ತಮ್ಮ ಟ್ರುತ್ ಸೋಶಿಯಲ್‌ನಲ್ಲಿ ಹಂಚಿಕೊಂಡ ಟ್ರಂಪ್ ಲೆಬನಾನ್‌ನ ಅತ್ಯಂತ ಗೌರವಾನ್ವಿತ ಅಧ್ಯಕ್ಷ ಜೋಸೆಫ್ ಔನ್ ಮತ್ತು ಇಸ್ರೇಲ್ ಪ್ರಧಾನಿ ಬೀಬಿ ನೆತನ್ಯಾಹು ಅವರೊಂದಿಗೆ ನಾನು ಅತ್ಯುತ್ತಮ ಸಂಭಾಷಣೆ ನಡೆಸಿದ್ದೇನೆ. ಈ ಇಬ್ಬರು ನಾಯಕರು ತಮ್ಮ ದೇಶಗಳ ನಡುವೆ 17ಶಾಂತಿಯನ್ನು ಸಾಧಿಸಲು, ಗುರುವಾರ ಸಂಜೆ 5 ಗಂಟೆ ET ಭಾರತೀಯ ಕಾಲಮಾನದ ಪ್ರಕಾರ ಏ.17ರ ಮಧ್ಯರಾತ್ರಿ 10 ದಿನಗಳ ಕದನವಿರಾಮ ಔಪಚಾರಿಕವಾಗಿ ಜಾರಿಯಾಗಲಿದೆ ಎಂದು ತಿಳಿಸಿದ್ದಾರೆ.



**ಗುಂಪಿಗೆ ಟ್ರಂಪ್ ಸಂದೇಶ ಏನದು?**

**10 ಯುದ್ಧಗಳನ್ನು ನಿಲ್ಲಿಸಿದ್ದೇನೆ ಎಂದು ಟ್ರಂಪ್ ಹೇಳಿಕೆ:** ಇದೇ ವೇಳೆ, ಮತ್ತೆ ಯುದ್ಧವನ್ನು ನಿಲ್ಲಿಸುವಲ್ಲಿ ತಮಗೆ ತಾವು ಕ್ರೆಡಿಟ್ ಕೊಡುವುದನ್ನು ಮುಂದವರೆಸಿದ ಟ್ರಂಪ್ ಇದು ತಾನು ನಿಲ್ಲಿಸಿರುವ 10ನೇ ಯುದ್ಧ ಎಂದು ತಿಳಿಸಿದ್ದಾರೆ.

ಈ ಕುರಿತು ಮಂಗಳವಾರ ಉಭಯ ದೇಶಗಳು 34 ವರ್ಷಗಳಲ್ಲಿ ಮೊದಲ ಬಾರಿಗೆ ವಾಷಿಂಗ್ಟನ್ DCಯಲ್ಲಿ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಅವರೊಂದಿಗೆ ಭೇಟಿಯಾಗಿದ್ದಾರೆ. ಈ ವೇಳೆ, ಇಸ್ರೇಲ್ ಮತ್ತು ಲೆಬನಾನ್‌ನೊಂದಿಗೆ ಶಾಶ್ವತ ಶಾಂತಿಯನ್ನು ಸಾಧಿಸಲು ಕೆಲಸ ಮಾಡುವಂತೆ ಉಪಾಧ್ಯಕ್ಷ ಜೆಡಿ ವ್ಯಾನ್ಸ್, ರುಬಿಯೊ, ಜಂಟಿ ಮುಖ್ಯಸ್ಥರ ಅಧ್ಯಕ್ಷ ಡ್ಯಾನ್ ರಾಜಿನ್ ಕೇನ್ ಅವರೊಂದಿಗೆ ಇಸ್ರೇಲ್ ನಾನು ನಿರ್ದೇಶಿಸಿದ್ದೇನೆ.

ಈ ಮೂಲಕ ಪ್ರಪಂಚದಾದ್ಯಂತ 9 ಯುದ್ಧಗಳನ್ನು ಪರಿಹರಿಸುವ ಗೌರವ ನನಗೆ ಸಿಕ್ಕಿದ್ದು, ಇದು ನಾನು ನಿಲ್ಲಿಸುವ 10 ನೇ ಯುದ್ಧವಾಗಿರುತ್ತದೆ, ಆದ್ದರಿಂದ ಇದನ್ನು ಮುಗಿಸೋಣ ಎಂದು ಬರೆದುಕೊಂಡಿದ್ದಾರೆ.

### ಹೆಜ್ಬೊಲ್ಲಾ ವಿರೋಧದ ನಡುವೆಯೂ ಟ್ರಂಪ್ ಸಂದೇಶ

**ಇತ್ತ, ಈ ಕದನವಿರಾಮವನ್ನು ಲೆಬನಾನ್‌ನ ಹೆಜ್ಬೊಲ್ಲಾ ಬಂಡುಕೋರ ಪಡೆಗಳು ವಿರೋಧಿಸಿದ್ದು, ಲೆಬನಾನ್ ಸರ್ಕಾರ ಇಸ್ರೇಲ್ ನೊಂದಿಗೆ ಮಾತುಕತೆ ನಡೆಸಿರುವುದು ಒಂದು ಗಂಭೀರ ಪಾಪ ಮತ್ತು ಒಂದು ಗಂಭೀರ ದೋಷವಾಗಿದೆ. ಹೀಗೆ ಮಾಡುವ ಮೂಲಕ ಸರ್ಕಾರ ಅಮೆರಿಕಾದ ಆಶಯಗಳಿಗೆ ಮಣಿದಿದೆ ಎಂದು ಟೀಕಿಸಿದ್ದು, ಬೈರುತ್ ಇಸ್ರೇಲ್, USಗೆ ರಿಯಾಯಿತಿ ನೀಡುವುದನ್ನು ನಿಲ್ಲಿಸಬೇಕು ಎಂದು ಕದನವಿರಾಮ ಘೋಷಣೆಯಾಗುವ ಕೆಲವೇ ಗಂಟೆಗಳ ಮೊದಲ ವಿರೋಧ ವ್ಯಕ್ತಪಡಿಸಿದ್ದರು.**

ಇದಕ್ಕೂ ಮೊದಲು ಟ್ರಂಪ್ ತಾವು ಜಾಗತಿಕವಾಗಿ 9 ಯುದ್ಧಗಳನ್ನು ನಿಲ್ಲಿಸಿದ್ದು, ನೋಬೆಲ್ ಪ್ರಶಸ್ತಿಗೆ ಅರ್ಹ ವ್ಯಕ್ತಿಯಾಗಿದ್ದೇನೆ ಎಂದು ಪ್ರತಿಪಾದಿಸಿದ್ದಾರೆ.

### ಇಸ್ರೇಲ್-ಲೆಬನಾನ್ ನಾಯಕರನ್ನು ಮಾತುಕತೆಗಾಗಿ ಅಮೆರಿಕಾಗೆ ಟ್ರಂಪ್ ಆಹ್ವಾನ

**ಇದೇ ವೇಳೆ, ಉಭಯ ದೇಶಗಳ ನಾಯಕರೊಂದಿಗೆ ಮಾತುಕತೆಗಾಗಿ ಅವರನ್ನು ಅಮೆರಿಕಾಗೆ ಆಹ್ವಾನಿಸುವುದಾಗಿ ತಿಳಿಸಿರುವ ಟ್ರಂಪ್ ಈ ಕುರಿತು 1983 ರ ನಂತರ ಇಸ್ರೇಲ್. ಲೆಬನಾನ್ ನಡುವಿನ ಮೊದಲ ಅರ್ಥಪೂರ್ಣ ಮಾತುಕತೆಗಾಗಿ ಇಸ್ರೇಲ್ ಪ್ರಧಾನಿ ಬೀಬಿ ನೆತನ್ಯಾಹು ಮತ್ತು ಲೆಬನಾನ್ ಅಧ್ಯಕ್ಷ ಜೋಸೆಫ್ ಔನ್ ಅವರನ್ನು ಶ್ವೇತಭವನಕ್ಕೆ ಆಹ್ವಾನಿಸುತ್ತಿದ್ದೇನೆ ಎಂದು ತಿಳಿಸಿದ್ದಾರೆ. ಈ ಕದನವಿರಾಮದ ಕುರಿತು ಟ್ರಂಪ್ ಘೋಷಿಸಿದ ಬಳಿಕ ಶೀಘ್ರವೇ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು. ಲೆಬನಾನ್ ಪ್ರಧಾನಿ ನವಾಫ್ ಸಲಾಮ್ ದೃಢೀಕರಿಸಿದ್ದಾರೆ.**

ಈ ಕುರಿತು ಈಗಾಗಲೇ ಹಲವು ಬಾರಿ ಟ್ರಂಪ್ ತಾನು ಇಸ್ರೇಲ್-ಇರಾನ್ ನಡುವಿನ 12 ದಿನಗಳ ಯುದ್ಧ, ಪಾಕಿಸ್ತಾನ, ಭಾರತದ ನಡುವಿನ ಪಹಲ್ಗಾಮ್ ದಾಳಿ ಬಳಿಕ ನಡೆದ ಸಂಘರ್ಷ ಸೇರಿದಂತೆ ಕಾಂಬೋಡಿಯಾ, ಥೈಲ್ಯಾಂಡ್, ಅಜೆರ್ಬೈಜಾನ್, ಅರ್ಮೇನಿಯಾ, ಕಾಂಗೋ ಮತ್ತು ರುವಾಂಡಾ, ಸರ್ಬಿಯಾ ಮತ್ತು ಕೊಸೊವೊ, ಈಜಿಪ್ಟ್ ಮತ್ತು ಇಥಿಯೋಪಿಯಾ, ಇಸ್ರೇಲ್-ಹಮಾಸ್ ನಡುವಿನ ಯುದ್ಧಗಳನ್ನು ನಿಲ್ಲಿಸಿರುವುದಾಗಿ ಪ್ರತಿಪಾದಿಸಿದ್ದರು. ಆದಾಗ್ಯೂ, ಭಾರತ-ಪಾಕ್ ನಡುವಿನ ಕದನವಿರಾಮದಲ್ಲಿ ಅಮೆರಿಕಾದ ಪಾತ್ರವಿಲ್ಲ ಎಂದು ಭಾರತ ಸ್ಪಷ್ಟಪಡಿಸಿದೆ. ಕದನವಿರಾಮವನ್ನು ಒಪ್ಪಿಕೊಂಡಾಗ್ಯೂ, ದಕ್ಷಿಣ ಲೆಬನಾನ್‌ನಲ್ಲಿನ ತಮ್ಮ ಸ್ಥಾನಗಳಿಂದ ದೇಶದ ಪಡೆಗಳು ಹಿಂದೆ ಸರಿಯುವುದಿಲ್ಲ ಎಂದು ಇಸ್ರೇಲ್ ಪ್ರಧಾನಿ ಸ್ಪಷ್ಟಪಡಿಸಿದ್ದಾರೆ.

ಇತ್ತ, ಲೆಬನಾನ್ ಸೇನೆಯು ಅಲರ್ಟ್ ಆಗಿದೆ. ಇನ್ನು, ಕದನ ವಿರಾಮ ಘೋಷಣೆಯಾದ ಬಳಿಕ ಹೆಜ್ಬೊಲ್ಲಾ ಪಡೆಗಳಿಗೆ ಡೊನಾಲ್ಡ್ ಟ್ರಂಪ್ ವಾರ್ನಿಂಗ್ ನೀಡಿದ್ದು, ಈ ಮಹತ್ವದ ಅವಧಿಯಲ್ಲಿ ಹೆಜ್ಬೊಲ್ಲಾ ಒಳ್ಳೆಯ ರೀತಿಯಲ್ಲಿ, ಉತ್ತಮವಾಗಿ ಕಾರ್ಯನಿರ್ವಹಿಸುತ್ತಾರೆ ಎಂದು ನಾನು ಭಾವಿಸುತ್ತೇನೆ. ಅವರು ಹಾಗೆ ಮಾಡಿದರೆ ಅದು ಅವರಿಗೆ ಅದ್ಭುತ ಅವರಿಗೆ ಕ್ಷಣವಾಗಿರಲಿದೆ. ಇನ್ನು ಮುಂದೆ ಕೊಲ್ಲುವಂತಹ ಅಗತ್ಯವಿಲ್ಲ. ಅಂತಿಮವಾಗಿ ಶಾಂತಿ ನೆಲೆಸಬೇಕು ಎಂದು ಎಚ್ಚರಿಕೆ ನೀಡಿದ್ದಾರೆ.

